ಕೊಡವ ಜನಪದ–ಲೋಕದೃಷ್ಟಿಯ ಸ್ವರೂಪ

ಪಿ.ಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಲಿರುವ ಸಂಶೋಧನಾ ಮಹಾಪ್ರಬಂಧದ ಸಾರಲೇಖ

Reg.06.01.2014

ಸಂಶೋಧಕರು

ಭಾಗ್ಯವತಿ ಬಿ.
ಸಂಶೋಧನಾ ವಿದ್ಯಾರ್ಥಿ
ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ
ಮಂಗಳಗಂಗೋತ್ರಿ–574199

ಮಾರ್ಗದರ್ಶಕರು

ಡಾ. ಲಕ್ಷ್ಮೀದೇವಿ ಎಲ್.
ಪ್ರಾಂಶುಪಾಲರು
ವಿಶ್ವವಿದ್ಯಾಲಯ ಸಂಧ್ಯಾ ಕಾಲೇಜು,
ಮಂಗಳೂರು

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳಗಂಗೋತ್ರಿ
ಮಂಗಳೂರು ವಿಶ್ವವಿದ್ಯಾನಿಲಯ–574199
2023

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ

ಕರ್ನಾಟಕ ಜಾನಪದ ಆಧಯಯದ ಜೊತೆಗೆ ಕೊಡವರ ಜಾನಪದ ಅಧ್ಯಯನವನ್ನು ತೌಲನಿಕವಾಗಿ ಪರಿಶೀಲಿಸಿದಾಗ ಕೊಡವರ ಜಾನಪದ ಅಧ್ಯಯನವೂ ಹೆಚ್ಚು ವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕವಾಗಿ ನಡೆದಿದ್ದರೂ, ಸಂಖ್ಯೆ ಹಾಗೂ ವಿಷಯಗಳ ದೃಷ್ಟಿಯಿಂದ ಅಲ್ಪ ಪ್ರಮಾಣದಲ್ಲಿ ನಡೆದಿದೆ. ಕ್ಷೇತ್ರಕಾರ್ಯ, ಮಾಹಿತಿಗಳ, ಸಂಗ್ರಹ, ಹಲವು ಪಠ್ಯಗಳ ದಾಖಲಾತಿ, ಜನಾಂಗ ಮತ್ತು ಸಾಂಸ್ಕೃತಿಕ ಅಧ್ಯಯನ, ಕಲಾವಿದಕೇಂದ್ರಿತ ಅಧ್ಯಯನ, ಬೃಹತ್ ಮಾಹಿತಿ ಶರೀರದ ಸಂರಚನೆ, ಮಾಹಿತಿಗಳ ಚಾರಿತ್ರಿಕ ಹಾಗೂ ಆನ್ವಯಿಕ ವಿಶ್ಲೇಷಣೆ ಹೀಗೆ ಕೊಡವ ಜಾನಪದ ಆಧ್ಯಯನವು ಅಷ್ಟೇನು ಸಮರ್ಪಕವಾಗಿ ನಡೆದಿಲ್ಲ. ಹಾಗಾಗಿ ಲೋಕದೃಷ್ಟಿಯಂತಹ ಪರಿಕಲ್ಪನೆಯನ್ನು ಇಟ್ಟುಕೊಂಡು ತಾತ್ತ್ವಿಕವಾಗಿ ಕೊಡವರ ಜನಪದ ಸಾಹಿತ್ಯದ ಆಕರಗಳನ್ನು ಆಧರಿಸಿ ವಿವೇಚಿಸುವ ಪ್ರಯತ್ನವನ್ನು ಈ ಮಹಾಸಂಶೋಧನಾ ಪ್ರಬಂಧದಲ್ಲಿ ಮಾಡಲಾಗಿದೆ. ಕೊಡವರ ಲೋಕದೃಷ್ಟಿಯನ್ನು ರೂಪಿಸಿದ ಅಂಶಗಳಾವುದು? ಹಲವು ಸಾಂಸ್ಕೃತಿಕ ಆಕ್ರಮಣವನ್ನು ತಡೆದುಕೊಂಡು ಸಾಂಸ್ಕೃತಿಕ ವಿಸ್ಮೃತಿಗೆ ಒಳಗಾಗದೆ ತನ್ನ ಅಸ್ಮಿತೆಯನ್ನು ಕಾಪಾಡಿಕೊಂಡು ಬಂದ ಬಗೆ ಹೇಗೆ? ಸ್ಥಳೀಯ ಜ್ಞಾನಪರಂಪರೆಯು ದೀರ್ಘ ಕಾಲದವರಗೆ ಉಳಿದು ಬರಲು ಪ್ರೇರಣೆಗಳೇನು? ಇವರ ಒಕ್ಕದ (ಕುಟುಂಬದ) ಒಗ್ಗಟ್ಟಿಗೆ ಪ್ರೇರಕವಾದ ಸಂಗತಿಗಳು ಛಿದ್ರವಾಗುತ್ತಿರುವ ಆಧುನಿಕ ಸಮಾಜದ ಸಂಬಂಧಗಳಿಗೆ ಕೊಡುವ ಸಂದೇಶವೇನು? ಆಧುನೀಕರಣದ ಸಂದರ್ಭದಲ್ಲಿ ಕೆಲಸ, ದುಡಿಮೆಯ ಮಹತ್ವವನ್ನು ಕೊಡವರು ಗ್ರಹಿಸಿರುವ ಬಗೆ ಎಂತಹುದು? ಜಾಗತಿಕ ತಾಪಮಾನ ಹಾಗೂ ಪರಿಸರದ ಮೇಲಿನ ಮನುಷ್ಯರ ಆಕ್ರಮಣದ ಹಿನ್ನೆಲೆಯಿಂದ ಕೊಡವರ ಪರಿಸರ ಕಾಳಜಿಯೇನು? ಇವೇ ಮೊದಲಾದ ಪ್ರಶ್ನೆಯನ್ನು ಎತ್ತಿಕೊಂಡು ಅಧ್ಯಯನ ಮಾಡುವ ಪ್ರಯತ್ನವನ್ನು ಮಾಡಲಾಗಿದೆ.

ಈ ಸಂಶೋಧನೆಯ ಅಧ್ಯಾಯಗಳು ಒಳಗೊಳ್ಳುವ ಮಾಹಿತಿಗಳು ಮತ್ತು ಅವುಗಳ ವಿಶ್ಲೇಷಣೆಯು ಅಧ್ಯಯನದ ಉದ್ದೇಶಗಳನ್ನು ಸ್ಪಷ್ಟಪಡಿಸುತ್ತದೆ. ಬೇರೆಬೇರೆ ಅಧ್ಯಾಯಗಳ ಬರವಣಿಗೆಯ ಸಂದರ್ಭದಲ್ಲಿ ಅಯಾಯ ಅಧ್ಯಾಯದ ಉದ್ದೇಶಗಳನ್ನು ಹೆಚ್ಚು ವಿಸ್ತಾರವಾಗಿ ಪ್ರಸ್ತಾಪಿಸಲಾಗಿದೆ. ಕೊಡವರ ಜನಪದದಲ್ಲಿ ಲೋಕದೃಷ್ಟಿಯ ಸ್ವರೂಪವನ್ನು ಅಧ್ಯಯನ ಮಾಡುವ

ಮುಖ್ಯವಾದ ಉದ್ದೇಶವೆಂದರೆ ಕೊಡವರ ವಿಮರ್ಶನ ಪ್ರಜ್ಞೆಯನ್ನು ಶೋಧಿಸುವುದಾಗಿದೆ. ಕೊಡವರ ಜನಪದದಲ್ಲಿ ಪ್ರಕಟವಾದ ಕೊಡವರ ಲೋಕದೃಷ್ಟಿಯು ಅವರ ಲೋಕಗ್ರಹಿಕೆಯ ಲೋಕವಿಮರ್ಶೆ ಹಾಗೂ ಜೀವನ ಮೌಲ್ಯಗಳ ವಿಮರ್ಶೆಯೇ ಆಗಿದೆ. ಬೌದ್ಧಿಕವಾಗಿ ಕೊಡವರು ನಡೆಸಿರುವ ಆಲೋಚನೆಗಳು, ವಾಸ್ತವ ಲೋಕದ ಬೇರೆಬೇರೆ ಘಟಕಗಳ ಕುರಿತಂತೆ ಅವರು ಹೊಂದಿರುವ ಭಾವನೆಗಳು, ಒಕ್ಕ (ಕುಟುಂಬ), ದುಡಿಮೆ, ಮದುವೆ, ಸಾವು, ಜನನ, ಪ್ರಕೃತಿ, ದೈವ, ಕಾರೋಣ, ಕೈಮಡ, ಐನ್‌ಮನೆ, ನೆಲ್ಲಕ್ಕಿ ನಡುಬಾಡೆ, ತೂಕ್‌ಬೊಳಕ್ (ನಂದಾದೀಪ), ಪತ್ತಾಯ (ಭತ್ತ ಸಂಗ್ರಹ ಸಾಧನೆ), ಮುಂತಾದ ಪರಿಕಲ್ಪನೆಗಳ ಬಗೆಗಿನ ನಂಬಿಕೆ, ಆಚರಣೆ ಹಾಗೂ ಪ್ರತಿಕ್ರಿಯೆಗಳನ್ನು ಗಮನಿಸಿ ಅವರ ಲೋಕದೃಷ್ಟಿಯನ್ನು ಅನಾವರಣ ಮಾಡುವುದು ಈ ಸಂಶೋಧನಾ ಪ್ರಬಂಧದ ಉದ್ದೇಶ. ಕೊಡವರು ಇತರ ಸಂಸ್ಕೃತಿಗಳು ಮತ್ತು ಧಾರ್ಮಿಕ ಪ್ರಸ್ಥಾನಗಳ ಜೊತೆಗಿನ ಅನುಸಂಧಾನವನ್ನು ನಡೆಸಿದ ರೀತಿಯನ್ನು ಶೋಧಿಸುವ ಪ್ರಯತ್ನವನ್ನು ಮಾಡಲಾಗಿದೆ. ಕೊಡವರ ಸಮಗ್ರವಾದ ಲೋಕದೃಷ್ಟಿಯ ಸ್ವರೂಪವನ್ನು ಅನಾವರಣ ಮಾಡಿ ಆ ಮೂಲಕ ಕೊಡವರ ಜನಪದ ಹಿರಿಮೆ ಹಾಗೂ ಅವರ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟುವ ಉದ್ದೇಶವನ್ನು ಈ ಸಂಶೋಧನೆಯು ಹೊಂದಿದೆ. ಸಂಸ್ಕೃತೀಕರಣದ ಪ್ರಭಾವಕ್ಕೆ ಒಳಗಾಗಿರುವ ಕೊಡವರ ಅಸ್ಮಿತೆಯ ನೆಲೆಗಳನ್ನು ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ. ದೇಸಿ ಚಿಂತನೆಯು ಒಳಗೊಳ್ಳುವ ಕೃಷಿಕೇಂದ್ರಿತ, ಕುಟುಂಬ ಕೇಂದ್ರಿತ, ಸ್ವಾವಲಂಬನೆಯ, ಪ್ರಜಾಸತ್ತಾತ್ಮಕ ಸಂತುಲಿತ ಸಮಾಜವೊಂದನ್ನು ಕಟ್ಟಿ ಮುನ್ನೆಡೆಸುತ್ತಾ ಬಂದ ಬಗೆಯನ್ನು ಶೋಧಿಸುವುದು ಈ ಸಂಶೋಧನೆಯ ಪ್ರಮುಖ ಉದ್ದೇಶವಾಗಿದೆ.

ಕೊಡವರ ಜನಪದದಲ್ಲಿ ಪ್ರಕಟವಾದ ಲೋಕದೃಷ್ಟಿಯ ಸ್ವರೂಪವನ್ನು ಚರ್ಚಿಸುವ ಈ ಸಂಶೋಧನೆಯು ಪರಿಕಲ್ಪನಾತ್ಮಕ ಅಧ್ಯಯನವಾಗಿದೆ. ಹಾಗಾಗಿ ಲೋಕದೃಷ್ಟಿಯ ಪರಿಕಲ್ಪನೆ, ಅದರ ಸ್ವರೂಪ ಮತ್ತು ವ್ಯಾಪ್ತಿಯನ್ನು ಆರಂಭದಲ್ಲಿ ಸ್ಪಷ್ಟಪಡಿಸಿಕೊಳ್ಳಲಾಗಿದೆ. ಈವರೆಗೆ ಪ್ರಕಟವಾದ ಕೊಡವರ ಜನಪದ ಕಾವ್ಯ, ಆಚರಣೆ, ನಂಬಿಕೆಗಳನ್ನು ಅಧ್ಯಯನ ಮಾಡಿ ಲೋಕದೃಷ್ಟಿಯನ್ನು ನಿರೂಪಿಸಿಕೊಳ್ಳಲಾಗಿದೆ. ಕೊಡವರ ಜನಪದ ಮತ್ತು ಸಂಸ್ಕೃತಿಯನ್ನು ಗಮನಿಸಿ ಈ ಲೋಕದೃಷ್ಟಿ ಒಳಗೊಳ್ಳಬಹುದಾದ ಇತರ ಆಯಾಮಗಳನ್ನು ಪರಿಶೀಲಿಸಿ ಲೋಕದೃಷ್ಟಿಯ ಅರ್ಥವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲಾಗಿದೆ.

ನಡಿಕೇರಿಯಂಡ ಚಿಣ್ಣಪ್ಪ, ಬಿ.ಡಿ. ಗಣಪತಿ, ಐ.ಮಾ. ಮುತ್ತಣ್ಣ, ಭೀಮಂಡ ಈ. ಕುಶಾಲಪ್ಪ, ಡಾ. ಪಿ.ಎಸ್. ರಾಮಾನುಜಂ, ಐತಿಚಂಡ ರಮೇಶ್ ಉತ್ತಪ್ಪ, ಬಾಚಿರಣಿಯಂಡ

ಅಪ್ಪಣ್ಣ, ಎಂ.ಜಿ. ನಾಗರಾಜ್, ವಿಜಯ್ ಪೂಣಚ್ಚ ತಂಬಂಡ, ಡಾ. ಎಂ.ಪಿ. ರೇಖಾ, ಚಿರಿಯಪಂಡ ಎಂ. ರಾಜಾ ನಂಜಪ್ಪ, ನಾಗೇಶ್ ಕಾಲೂರು, ಡಾ. ನಾಗೇಶ್ ಹೆಬ್ಬಾಲೆ, ಡಾ. ಅಶೋಕ್ ಆಳ್ವ, ಡಾ. ಕಾವೇರಿ ಪ್ರಕಾಶ್, ಮೊದಲಾದ ಜಾನಪದ ಸಾಹಿತ್ಯ ವಿದ್ವಾಂಸರು ತಮ್ಮ ಅಧ್ಯಯನಗಳಲ್ಲಿ ಪ್ರಕಟಪಡಿಸಿದ ಕೊಡವರ ಜೀವನ ಮೌಲ್ಯಗಳನ್ನು, ಕೊಡವರ ಜನಪದ ಕಾವ್ಯಗಳ ವಸ್ತು, ಅದು ಹಾಡುವ ಸಂದರ್ಭ ಮತ್ತು ಅದರ ರೂಪ, ಒಕ್ಕ, ಮನೆಪದ, ಐನ್‌ಮನೆ, ನೆಲ್ಲಕ್ಕಿ ನಡುಬಾಡೆ, ಕೈಮಡ, ದೇವರಕಾಡು, ಕಾರೋಣ, ಮದುವೆ, ಜನನ–ಮರಣದ ಸಂದರ್ಭ, ಇವೇ ಮುಂತಾದವುಗಳ ಬಗೆಗೆ ನಡೆಸಿರುವ ವಿಶ್ಲೇಷಣೆಯಲ್ಲಿ ಮಹತ್ವದ ಒಳನೋಟಗಳನ್ನು ಹಿನ್ನೆಲೆಯಾಗಿರಿಸಿಕೊಂಡು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾದ ಮಾಹಿತಿಗಳನ್ನು ಆಧರಿಸಿ ಈ ಸಂಶೋಧನಾ ಗ್ರಂಥವನ್ನು ರಚಿಸಲಾಗಿದೆ. .

ಭಾರತ ಬಹುಭಾಷೆಗಳ ತೊಟ್ಟಿಲು. ಇಲ್ಲಿ ನೆಲೆನಿಂತಿರುವ ಜನಪದರ ಬದುಕು ಏಕಮುಖವಾದ ವಸ್ತು ಸ್ಥಿತಿಯಂತೆ ಕಂಡರೂ, ಪ್ರತಿಯೊಂದು ಗ್ರಾಮ, ಸಮುದಾಯ ತನ್ನದೇ ಆದ ರೂಪ, ಸ್ವರೂಪ, ಗುಣ, ವ್ಯಾಪ್ತಿ, ಮೌಲ್ಯ ಹೊಂದಿದೆ. ಕೊಡವ ಭಾಷೆಯು ಕೂಡ ಜನರ ಸಂಸ್ಕೃತಿಯ ಪ್ರತಿನಿಧಿಕವಾಗಿದೆ. ಕೊಡವ ಜನರ ಆಚಾರವಿಚಾರ, ನಂಬಿಕೆ, ರೂಢಿ ಸಂಪ್ರದಾಯಗಳು ಕನ್ನಡ ಭಾಷೆಯಲ್ಲೇ ಉಲ್ಲೇಖವಾಗಿರುವುದರಿಂದ ಕನ್ನಡದ ಜನಪದ ಸಾಹಿತ್ಯ ಇತಿಹಾಸದೊಂದಿಗೆ ಸೇರಿಕೊಂಡಿದೆ. ಭೌಗೋಳಿಕವಾಗಿ ಕೊಡಗು ಸಣ್ಣ ಪ್ರದೇಶ. ಭಾಷೆಯನ್ನು ಬಳಸುವ ದೃಷ್ಟಿಯಿಂದಲೂ ಕೊಡವ ಭಾಷೆನ್ನಾಡುವವರ ಸಂಖ್ಯೆ ಕಡಿಮೆ. ಆಡಳಿತಕ್ಕಾಗಿ ಕನ್ನಡವನ್ನೆ ಬಳಸುತ್ತಿರುವ ಕನ್ನಡದ ಪ್ರಾದೇಶಿಕ ಭಾಷೆ. ಆದರೂ ಸಾಂಸ್ಕೃತಿಕವಾಗಿ ಹಾಗೂ ಪ್ರಾಕ್ಕೃತಿಕವಾಗಿ ಶ್ರೀಮಂತವಾಗಿದೆ. ಕೊಡಗು ವಿಜಯನಗರದ ಅರಸರು, ಚೋಳರು, ಚಾಲುಕ್ಯರು, ಹಾಲೇರಿ ಅರಸರು ಕೊನೆಗೆ ಬ್ರಿಟೀಷರಿಂದಲೂ ಆಳಿಸಿಕೊಂಡರೂ ವಿಚಲಿತರಾಗದೆ, ತಮ್ಮ ಭಾಷೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ದೇಶಿ ಪರಂಪರೆಯ ಬೇರುಗಳನ್ನು ಹೊಂದಿರುವ ವಿಶಿಷ್ಟವಾದ ಕೊಡವರ ಸಾಂಸ್ಕೃತಿಕ, ಸಾಮಾಜಿಕ, ಸಾಮುದಾಯಿಕ ನೆಲೆಗಳನ್ನು ಕೊಡವರ ಜನಪದ ಆಚರಣೆಗಳ ಮೂಲಕ ಗುರುತಿಸಿ ಕೊಡವರ ಸಾಮರಸ್ಯತೆಯ ಬದುಕನ್ನು ಅರಿಯುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅಧ್ಯಯನದ ಸ್ವರೂಪ

ಕೊಡವ ಸಮೂದಾಯದ ಜನಪದದಲ್ಲಿ ವ್ಯಕ್ತವಾದ ಲೋಕದೃಷ್ಟಿಯನ್ನು ಅಧ್ಯಯನ ಮಾಡುವ ಉದ್ದೇಶವಿರಿಸಿಕೊಂಡ ಈ ಸಂಶೋಧನಾ ಮಹಾಪ್ರಬಂಧದ ಮೊದಲನೇಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ಮಹತ್ವವನ್ನು ತಿಳಿಸುತ್ತಾ, ಕೊಡವರ ಜನಪದದ ಸ್ವರೂಪ ಹಾಗೂ ವೈಶಿಷ್ಟ್ಯವನ್ನು ಚರ್ಚಿಸಲಾಗಿದೆ. ಕೊಡವ ಜನಪದ ಕ್ಷೇತ್ರದಲ್ಲಿ ಈವರೆಗೆ ನಡೆದ ಸಂಶೋಧನಾ ಸಮೀಕ್ಷೆಯನ್ನು ಮಾಡುತ್ತಾ ಪ್ರಸ್ತುತ ಅಧ್ಯಯನದ ಪ್ರಸ್ತುತತೆಯನ್ನು ವಿವರಿಸಲಾಗಿದೆ.

ಸಂಶೋಧನಾ ಪ್ರಬಂಧದ ಎರಡನೇ ಅಧ್ಯಾಯದಲ್ಲಿ ಲೋಕದೃಷ್ಟಿಯ ಪರಿಕಲ್ಪನೆಯನ್ನು ನಿರ್ವಚಿಸಿಕೊಳ್ಳಲಾಗಿದೆ. ಪಾಶ್ಚಾತ್ಯ ವಿದ್ವಾಂಸರು, ದೇಸೀ ವಿದ್ವಾಂಸರು 'ಲೋಕದೃಷ್ಟಿ' ಪರಿಕಲ್ಪನೆಯನ್ನು ಪರಿಭಾವಿಸಿದ ಬಗೆಯನ್ನು ಚರ್ಚಿಸಲಾಗಿದೆ. ಕೊಡವರ ಲೋಕದೃಷ್ಟಿಯನ್ನು ವಿವರಿಸಿಕೊಳ್ಳಲು ಬೇಕಾದ ಕೊಡವ ಜನಪದ ಆಕರಗಳನ್ನು ಇಲ್ಲಿ ವಿವೇಚಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿ ಕೊಡವ ಜನಾಂಗ, ಕೊಡವ ಜನಾಂಗದ ಲೋಕದೃಷ್ಟಿಯ ಮೇಲೆ ಪ್ರಭಾವ ಬೀರುವ ಕೊಡಗಿನ ಭೌಗೋಳಿಕ ಪರಿಸರ, ಕೊಡವರ ಭಾಷೆ ಹಾಗೂ ಕೊಡವರ ಮೇಲಾದ ರಾಜಕೀಯ ಪ್ರಭಾವದ ಕುರಿತಾದ ಮಾಹಿತಿಯನ್ನು ವಿವರಿಸಿಕೊಳ್ಳಲಾಗಿದೆ. ಕೊಡವರ ಅಲಿಖಿತ ಇತಿಹಾಸದ ಪರಿಕಲ್ಪನೆಯನ್ನು ಇಲ್ಲಿ ವಿವೇಚಸಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ ಕೊಡವರ ಸಾಂಸ್ಕೃತಿಕ ಅನನ್ಯತೆಯನ್ನು, ಕೊಡವ ಜನಾಂಗ ಹಾಗೂ ಕೊಡಗಿನ ಇತರ ಸಮೂದಾಯದ ಹೊಂದಾಣಿಕೆಯನ್ನು, ಕೊಡವೇತರ ಸಮೂದಾಯದೊಂದಿಗೆ ಕೊಡವರ ಸಾಮರಸ್ಯದ, ಹೊಂದಾಣಿಕೆಯ ಬದುಕಿನ ಕುರಿತಾದ ವಿವರಗಳನ್ನು ನೀಡಲಾಗಿದೆ. ಕೊಡವರ ಸಾಂಸ್ಕೃತಿಕ ವಿಶೇಷವಾದ ಐನ್‌ಮನೆ, ಕೈಮಡಗಳು, ದೇವರಕಾಡು, ಭೌತಿಕ ಪರಿಕರಗಳು ಇತ್ಯಾದಿಗಳ ಬಗೆಗೆ ವಿವರವಾಗಿ ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಕೊಡವರ ಕೃಷಿ, ಬೇಟೆ ಮತ್ತು ಆಹಾರ ಸಂಬಂಧಿಸಿ ಮಾಹಿತಿಯನ್ನು ವಿವರಿಸಿಕೊಳ್ಳುವ ಕೊಡವರ ಲೋಕದೃಷ್ಟಿಯನ್ನು ಸ್ಪಷ್ಟಪಡಿಸಿಕೊಳ್ಳಲಾಗಿದೆ. ವ್ಯವಸಾಯ ಸಂಬಂಧಿತವಾದ ಹಾಡುಗಳು ಆಚರಣೆಗಳನ್ನು ಇಲ್ಲಿ ಮುಖ್ಯವಾಗಿ ಪರಿಗಣಿಸಲಾಗಿದೆ. ಪುತ್ತರಿ, ಎತ್ತುಪೋರಾಟ, ಸಾವು, ಕುಣಿತ ಮತ್ತು ಆರಾಧನಾ ಸಂದರ್ಭದ ಹಾಡುಗಳಲ್ಲಿ ಕೊಡವರ ಕೃಷಿ ಸಂಬಂಧಿತ ವಿವರಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಕೊಡವರ ಬೇಟೆಯ ಅನಿವಾರ್ಯತೆ ಹಾಗೂ ಅದು ಒಳಗೊಳ್ಳುವ ಮಾಹಿತಿ ಶರೀರವನ್ನು

ವಿವರಿಸಿಕೊಳ್ಳಲಾಗಿದೆ. ಕೈಲ್‌ಪೊಳ್ದ್, ಕಾವೇರಿ ಸಂಕ್ರಮಣ ಸಂದರ್ಭದ ವಿವರಣೆಗಳಲ್ಲಿ ವ್ಯಕ್ತವಾದ ಮಾಹಿತಿಯನ್ನು ಪರಿಗಣಿಸಿ ಬೇಟೆ, ಅಹಾರ ಸಂಸ್ಕೃತಿ ಮತ್ತುಅದರ ಸಂಗ್ರಹಣೆಯ ವಿವರವನ್ನು ನೀಡಿಲಾಗಿದೆ. ದುಡಿಮೆ, ಉತ್ಪಾದನೆ ಮತ್ತು ಬಳಕೆಯ ಕುರಿತಾದ ಕೊಡವರ ಲೋಕದೃಷ್ಟಿಯನ್ನು ಇಲ್ಲಿ ವಿವರಿಸಿಕೊಳ್ಳಲಾಗಿದೆ.

ಅಧ್ಯಾಯ ಆರರಲ್ಲಿ ಕೊಡವರ ಜೀವನಾವರ್ತನ ಹಾಗೂ ವಾರ್ಷಿಕಾವರ್ತನ ಆಚರಣೆಗಳ ಮಾಹಿತಿ ಶರೀರವನ್ನು ಚರ್ಚೆಗೆ ಒಳಪಡಿಸಿ ಕೊಡವರ ಲೋಕವಿಮರ್ಶನ ಪ್ರಜ್ಞೆಯನ್ನು ವಿವರಿಸಿಕೊಳ್ಳಲಾಗಿದೆ. ಜನನ, ನಾಮಕರಣ, ಮದುವೆ, ಸೀಮಂತ, ಬಾಣಂತನ, ಮರುಮದುವೆ, ಕೂಡಾವಳಿ ಪದ್ಧತಿ, ಸಾವು ಮತ್ತು ಸಾವಿನ ನಂತರದ ಆಚರಣೆಗಳು, ಜನನ–ಮರಣ–ಪುನರ್ಜನ್ಮಗಳ ಕುರಿತ ನಂಬಿಕೆಗಳ ಮಾಹಿತಿ ಶರೀರವನ್ನು ವಿವರಿಸಿಕೊಳ್ಳುವ ಮೂಲಕ ಕೊಡವರ ಜೀವನದರ್ಶನವನ್ನು ವಿವೇಚಿಸಲಾಗಿದೆ. ಹಬ್ಬಗಳು, ಆರಾಧನೆಗಳು, ಕುಣಿತಗಳು ಮತ್ತು ಕೊಡವರ ಆಟಗಳಲ್ಲಿ ಪ್ರಕಟವಾದ ಅವರ ಲೋಕದೃಷ್ಟಿಯನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ಅಧ್ಯಾಯ ಏಳರಲ್ಲಿ ಅಧ್ಯಯನದ ಫಲಿತಗಳನ್ನು ಕೊಡಲಾಗಿದೆ. ಮುಂದಿನ ಅಧ್ಯಯನದ ಸಾಧ್ಯತೆ ವಿವರವನ್ನು ನೀಡಲಾಗಿದೆ.

ಮಹಾಪ್ರಬಂಧದ ಅನುಬಂಧದಲ್ಲಿ ಸಾಂಸ್ಕೃತಿಕ ಪದಕೋಶ, ವಕ್ತೃಗಳ ವಿವರ, ಛಾಯಚಿತ್ರಗಳು ಹಾಗೂ ಪರಾಮರ್ಶನ ಗ್ರಂಥಗಳ ಯಾದಿಯನ್ನು ನೀಡಿಲಾಗಿದೆ.

ಕೊಡವರ ಜನಪದ – ಸ್ವರೂಪ, ವೈಶಿಷ್ಟ್ಯಗಳು

ಕೊಡವ ಭಾಷೆ ದ್ರಾವಿಡ ಭಾಷೆಗಳಲ್ಲಿ ಒಂದು. ಕೊಡವ ಭಾಷೆಯು ಕೊಡಗು ಜಿಲ್ಲೆಯ ಜನರ ಸಂಪರ್ಕ ಭಾಷೆ. ಕೊಡಗು ಜಿಲ್ಲೆಯಲ್ಲಿ ಕೊಡವ ಭಾಷಿಕರಲ್ಲದೆ ಇಲ್ಲಿ ಬಂದು ನೆಲೆಸಿರುವ ಇತರ ಜನ ಸಮುದಾಯದವರು ಕೊಡವ ಭಾಷೆಯನ್ನು ತಮ್ಮ ಸ್ಥಳೀಯ ವ್ಯವಹಾರ ಭಾಷೆಯನ್ನಾಗಿ ಬಳಸುತ್ತಿದ್ದಾರೆ. ಭೌಗೋಳಿಕವಾಗಿ ಕೊಡಗು ಪುಟ್ಟ ಜಿಲ್ಲೆಯಾದರೂ ಸಾಂಸ್ಕೃತಿಕವಾಗಿ ಅನನ್ಯವಾಗಿದೆ. ಕೊಡವ ಭಾಷೆಯಲ್ಲಿ ಶ್ರೀಮಂತವಾದ ಮೌಖಿಕ ಜಾನಪದ ಪರಂಪರೆ ಇದೆ. ಅನಕ್ಷರಸ್ಥ ಕೊಡವ ಜನಪದರು ತಮ್ಮ ಭಾವನೆ, ಆಲೋಚನೆಗಳನ್ನು ಜಾನಪದ

ಒಳಗೊಳ್ಳುವ ಕಲಾತ್ಮಕ ಅಭಿವ್ಯಕ್ತಿ ಮಾಧ್ಯಮಗಳಾದ ಜನಪದ ಕ್ಯಾವಗಳು, ಕಥೆ, ಒಗಟು, ಗಾದೆ, ಕುಣಿತಗಳು ಇತ್ಯಾದಿಗಳ ಮೂಲಕ ಪ್ರಕಟಿಸುತ್ತಾ ಬಂದಿದ್ದಾರೆ.

ಭಾಷೆ, ಸಂಸ್ಕೃತಿ, ಆಚಾರ–ವಿಚಾರ, ಉಡುಗೆ–ತೊಡುಗೆ, ಸಂಪ್ರದಾಯಗಳಲ್ಲಿ ಇತರ ಪ್ರದೇಶಗಳಿಗಿಂತ, ಜನಾಂಗಕ್ಕಿಂತ ಭಿನ್ನವಾಗಿ ಕಾಣುವ ಕೊಡಗು, ಕೊಡವ ಸಮುದಾಯ ಅಧ್ಯಯನ ಕುತೂಹಲವನ್ನು ಹೊಂದಿರುವುದು. ಕೊಡಗಿನಲ್ಲಿ ಕೊಡವರು, ಗೌಡರು, ಒಕ್ಕಲಿಗ ಗೌಡರು, ಅಗಸರು, ಅಡಿಯರು, ಈಡಿಗರು, ಉಪ್ಪಾರರು, ಕಣಿಯರು, ಕಾಪಳರು, ಕುಡಿಯರು, ಕುರುಬರು, ಕೊಯವರು, ಕೆಂಬಟ್ಟಿಯವರು, ಗಾಣಿಗರು, ಗೊಲ್ಲರು, ಜೇನುಕುರುಬರು, ದೇವಾಂಗ, ನಾಯಂಡ, ಪಾಲೆಯರು, ಐರಿಗಳು, ಹೆಗಡೆಗಳು, ಬಣಜಿಗಳು, ಬಣ್ಣರು, ಮೇದರು, ಯರವರು, ಲಿಂಗಾಯತರು, ಜಮ್ಮ ಮಾಪಿಳ್ಳೆಗಳು, ಮುಸ್ಲಿಮರು, ಕ್ರೈಸ್ತರು ಇತ್ಯಾದಿ ಜನಾಂಗದವರು ಸಾಂಸ್ಕೃತಿಕ ಹಾಗೂ ಸಾಮಾಜಿಕ ಭಿನ್ನಾಭಿಪ್ರಾಯಗಳಿದ್ದರೂ ಸಾಮರಸ್ಯತೆ ಹಾಗೂ ಪ್ರೀತಿ ವಿಶ್ವಾಸದಿಂದ ಬದುಕಿಕೊಂಡು ಬರುತ್ತಿರುವರು.

ಏಕೀಕರಣದ ನಂತರ ಕೊಡಗು ಕರ್ನಾಟಕದ ಒಂದು ಜಿಲ್ಲೆಯಾದರೂ ಪ್ರಾದೇಶಿಕವಾದ ಭಾಷೆ ಹಾಗೂ ಸಂಸ್ಕೃತಿಯಿಂದ ತನ್ನದೇ ಆದ ಅನನ್ಯತೆಯನ್ನು ಉಳಿಸಿಕೊಂಡಿದೆ. ಕೊಡವ ಭಾಷೆಗೆ ಸ್ವತಂತ್ರ ಲಿಪಿ ಇಲ್ಲ. ಕನ್ನಡದಲ್ಲಿಯೇ ಆಡಳಿತ ಹಾಗೂ ಶೈಕ್ಷಣಿಕ ವ್ಯವಹಾರ ನಡೆಯುತ್ತದೆ. ಸಾಹಿತ್ಯ ದಾಖಲೆಯೂ ಕನ್ನಡದಲ್ಲಿಯೇ ಆಗಿದೆ. ಕನ್ನಡದ ಉಪಭಾಷೆಯಾಗಿ ಗುರುತಿಸಿಕೊಂಡರೂ ಭಾಷಿಕವಾಗಿ ತಮಿಳು, ಮಲೆಯಾಳಂ ಸಂಬಂಧವನ್ನು ಹೊಂದಿರುವುದು ಕಂಡುಬರುತ್ತದೆ. ಮಹಾಪ್ರಬಂಧದ ಅಧ್ಯಯನವು ಕೊಡಗಿನ ಮೂಲನಿವಾಸಿಗಳಾದ ಕೊಡವರು ತಮ್ಮ ಲೋಕದರ್ಶನವನ್ನು, ಸಾಂಸ್ಕೃತಿಕ ಬದುಕನ್ನು ಕನ್ನಡದೊಳಗೆ ಕಟ್ಟಿಕೊಂಡಿರುವುದರಿಂದ, ಕೊಡವ ಜನಾಂಗದ ಜನಪದ ಅಧ್ಯಯನದ ಮೂಲಕ ಕೊಡವರ ಲೋಕದೃಷ್ಟಿಯನ್ನು ಅಧ್ಯಯನ ಮಾಡುವ ಉದ್ದೇಶವನ್ನಿರಿಸಿಕೊಳ್ಳಲಾಗಿದೆ.

ಕೊಡವ ಭಾಷಿಕರು ಕೊಡಗಿನಲ್ಲಿಯೇ ಹುಟ್ಟಿ ಬೆಳೆದವರು. ಯಾವುದೇ ಪ್ರದೇಶಗಳಿಂದ ವಲಸೆ ಬಂದವರಲ್ಲ. ಕೊಡವ ಭಾಷಿಕರೆಲ್ಲರೂ ಕೊಡಗಿನಲ್ಲಿ ಸ್ವಂತ ಜಮೀನುಗಳನ್ನು ಹೊಂದಿದವರು. ಈ ಭಾಷಿಕರು ಮುಖ್ಯವಾಗಿ ವ್ಯವಸಾಯಗಾರರು. ಜೊತೆಗೆ ಸರ್ಕಾರಿ, ಅರೆಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗಿಗಳಾಗಿಯೂ ದುಡಿಯುತ್ತಾರೆ. ಸ್ವಂತ ಜಮೀನುಗಳನ್ನು ಹೊಂದಿರುವ ಭೂಮಾಲಿಕರು ಕೂಲಿ ಕೆಲಸಕ್ಕೆ, ವ್ಯಾಪಾರ, ಪೌರೋಹಿತ್ಯಗಳಿಗೆ ತುಳು ಮತ್ತು ಮಲಯಾಳಂ ಭಾಷಿಕರನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ. ಕನ್ನಡ ಭಾಷಿಕರಲ್ಲಿ ಗೌಡ

ಜಾತಿಯವರೊಂದಿಗೆ ಹೆಚ್ಚಿನ ಸಂಪರ್ಕವನ್ನು ಕೊಡವರು ಹೊಂದಿರುತ್ತಾರೆ. ಒಂದೇ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ಈ ಎರಡೂ ವರ್ಗದವರು ತಮ್ಮ ಪ್ರದೇಶಗಳ ದೇವಾಲಯಗಳಲ್ಲಿ ಕಾರ್ಯಕರ್ತರಾಗಿ ಅತ್ಯಂತ ಹೊಣೆಗಾರರಾಗಿ ಪರಸ್ಪರ ಕೂಡಿ ಕೆಲಸ ಮಾಡುತ್ತಾರೆ. ಮದುವೆ, ಜನನ, ಸಾವು ಮುಂತಾದ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಈ ಎರಡೂ ವರ್ಗದವರೂ ಪರಸ್ಪರ ಪಾಲ್ಗೊಳ್ಳುತ್ತಾರೆ, ಕೊಡಗಿನ ಇತರೆ ವರ್ಗದವರಿಗಿಂತ ಗೌಡರೊಂದಿಗೆ ಕೊಡವರು ಸ್ನೇಹ ಸೌಹಾರ್ದಯುತ ಸಂಪರ್ಕವನ್ನು ಹೊಂದಿದ್ದಾರೆ.

ಕೊಡವರ ಕುಟುಂಬ ಪದ್ಧತಿ ಪಿತೃಪ್ರಧಾನವಾದುದು. ತಂದೆಯೇ ಯಜಮಾನ. ಇವರನ್ನು 'ಕೊರವುಕಾರ' (ಮನೆಯ ಯಜಮಾನ) ಎಂದೂ ಇವರ ಪತ್ನಿಯನ್ನು 'ಕೊರವುಕಾರತಿ' (ಮನೆಯ ಯಜಮಾನಿ) ಎಂದು ಕರೆಯುತ್ತಾರೆ. ಪ್ರತಿ ಕುಟುಂಬವು ಒಂದು 'ಒಕ್ಕಪದೆ' (ಕುಟುಂಬದ ಹೆಸರು) ದಿಂದ ಗುರುತಿಸಿಕೊಂಡಿದೆ. ಒಂದೇ ಒಕ್ಕ (ಕುಟುಂಬ)ದಲ್ಲಿ ಮದುವೆ ನಿಷಿದ್ಧ. ಒಕ್ಕದ ಆಸ್ತಿಯನ್ನು ಭಾಗ ಮಾಡುವಂತೆ ಇಲ್ಲ. ಒಕ್ಕದ ಸದಸ್ಯರ ಮಕ್ಕಳಾಗಿ ಜನಿಸಿದವರಿಗೆ ಆಸ್ತಿಯ ಹಕ್ಕು ದೊರೆಯುತ್ತದೆ. 'ಅರುವ' (ಸಮುದಾಯದ ಮುಖ್ಯಸ್ಥ) ಪದ್ಧತಿ ಇದ್ದು ಒಕ್ಕದ ವಿವಾಹ, ಸಾವುನೋವು, ಕಷ್ಟ–ಸುಖ, ಹಬ್ಬಹರಿದಿನಗಳಲ್ಲಿ ಅರುವ ಕುಟುಂಬಗಳ ಸದಸ್ಯರೂ ಭಾಗವಹಿಸುವರು. ಕೊಡವರ ಹೆಣ್ಣು ಮಕ್ಕಳು ತಮ್ಮದೇ ಆದ ಹಕ್ಕು ಮಾನ್ಯತೆಗೆ ಪಾಲುದಾರರಾಗಿರುತ್ತಾರೆ.

ಕೊಡವರ ಸಾಮಾಜಿಕತೆಯನ್ನು ಗಮನಿಸಿದರೆ ಇವರು ಕೊಡಗಿನಲ್ಲಿ ವಾಸಿಸುವ ಮೂಲನಿವಾಸಿಗಳು. ಇವರ ಗ್ರಾಮರಚನೆಯು ಇತರರಿಗಿಂತ ಭಿನ್ನವಾಗಿದೆ. ಸಾಮಾನ್ಯವಾಗಿ ಕೊಡವರ ಕುಟುಂಬಗಳು ಅವರವರ ತೋಟ, ಗದ್ದೆ ಇರುವಲ್ಲಿಯೆ ಮನೆಯನ್ನು ಮಾಡಿಕೊಂಡಿರುತ್ತಾರೆ. ದೂರದೂರವಿರುವ ಅನೇಕ ಕುಟುಂಬಗಳು ಸೇರಿ ಒಂದು ಗ್ರಾಮವಾಗಿದೆ. ಜಮೀನು ಹೊಂದಿರುವ ಕೊಡವರು ತಮ್ಮ ತೋಟ ಗದ್ದೆಗಳಲ್ಲಿ ಕೆಲಸ ಮಾಡುವವರಿಗೆ ಜಮೀನಿನ ಪಕ್ಕದಲ್ಲೆ ಮನೆಗಳನ್ನು ಕಟ್ಟಿ ಕೊಟ್ಟಿರುವುದು ಕಾಣುತ್ತದೆ. ಗ್ರಾಮಕ್ಕೆ ಒಬ್ಬ ಗ್ರಾಮ ತಕ್ಕ (ನ್ಯಾಯ ತೀರ್ಮಾನಿಸುವವನು–ಊರ ಹಿರಿಯ)ನಿರುತ್ತಾನೆ. ಇವರ ಆದೇಶದಂತೆ ಗ್ರಾಮದ ಅಭಿವೃದ್ಧಿ ಕೆಲಸ ಕಾರ್ಯಗಳು ನಡೆಯುತ್ತವೆ. ಕೊಡವರೊಳಗೆ ಜಗಳ, ಕಷ್ಟ ಬಂದಾಗ ಬಗೆಹರಿಸುವ, ಸಹಾಯವಾಗುವಂತೆ ಅನುಕೂಲ ಒದಗಿಸುವ ಕೆಲಸ 'ತಕ್ಕ'ನದು. ಗ್ರಾಮದೊಳಗೆ ವಾಸಿಸುವ ಎಲ್ಲಾ ಕೊಡವರು ಆ ಗ್ರಾಮದ ನಿಯಮಗಳಿಗೆ ಒಳಪಟ್ಟಿರುತ್ತಾರೆ. ಮೀರಿದರೆ ತಪ್ಪಿತಸ್ಥರೆಂದು ಪರಿಗಣಿಸಿ ದಂಡವಿಧಿಸುವ ನಿಯಮವಿದೆ. ಗ್ರಾಮದಲ್ಲಿ ದೇವರ ಕೆಲಸ

ಶುರುವಾಗುವಾಗ ಹಿಂಸೆ, ಬೇಟೆ, ಮರಕಡಿಯುವುದು, ಪರಸ್ತ್ರೀಯರ ಸಂಗ ಇತ್ಯಾದಿಗಳು ಶಿಕ್ಷಾರ್ಹ ತಪ್ಪುಗಳೆಂದು ಪರಿಗಣಿತವಾಗಿರುತ್ತದೆ. ತಪ್ಪು ಮಾಡಿದವರಿಗೆ ಜಾತ್ರೆ ಉತ್ಸವ ಹಬ್ಬಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶವಿರುವುದಿಲ್ಲ. ಅವರನ್ನು ಗ್ರಾಮದಿಂದ ಬಹಿಷ್ಕರಿಸಲಾಗುತ್ತದೆ. ಅವರಿಗೆ ಕ್ಷೌರಿಕ ಕ್ಷೌರ ಮಾಡುವಂತಿಲ್ಲ, ಮಡಿವಾಳ ಬಟ್ಟೆ ತೊಳೆಯುವಂತಿಲ್ಲ. ಬೇರೆ ಕೊಡವರು ಅವರ ಮನೆಗೆ ಹೋಗುವಂತಿಲ್ಲ. ಅವರ ದನಕರುಗಳನ್ನು ಬಯಲಿಗೆ ಬಿಡುವಂತಿಲ್ಲ. ತಪ್ಪಾಯಿತೆಂದು ಒಪ್ಪಿ, ತಪ್ಪುಕಾಣಿಕೆಯನ್ನು ನೀಡಿ ಇನ್ನು ಮುಂದೆ ಮಾಡುವುದಿಲ್ಲವೆಂದು ಪ್ರಮಾಣ ಮಾಡಿದರೆ ಗ್ರಾಮದವರೆಲ್ಲ ಎಚ್ಚರಿಕೆ ನೀಡಿ ತಮ್ಮಲ್ಲಿ ಸೇರಿಸಿಕೊಳ್ಳುತ್ತಾರೆ. ಇತ್ತೀಚೆಗೆ ಪಾಶ್ಚಿಮಾತ್ಯ ಜೀವನ ಕ್ರಮ ರೂಢಿಸಿಕೊಂಡ ಕೊಡವರ ಸಾಮಾಜಿಕತೆಯಲ್ಲೂ ಬದಲಾವಣೆಯಾಗಿದೆ. ಆರ್ಥಿಕವಾಗಿ ಕೊಡವರು ಸಬಲರಾಗಿದ್ದರೂ ಕೆಲವು ಕೊಡವರು ಹಿಂದುಳಿದವರಾಗಿದ್ದಾರೆ. ಬೇಟೆ ಹಾಗೂ ವ್ಯವಸಾಯವೇ ಮೂಲ ವೃತ್ತಿಯಾಗಿಸಿಕೊಂಡಿದ್ದ ಕೊಡವರು ಇಂದು ಸರ್ಕಾರದ ನಿಷೇಧವಿರುವುದರಿಂದ ಬೇಟೆಯನ್ನು ಭಾಗಶ: ಕೈ ಬಿಟ್ಟಿದ್ದಾರೆ. (ವಕ್ತೃ –ಬಾಚಿರಣಿಯಂಡ ಅಪ್ಪಣ್ಣ, ಕುಶಾಲನಗರ)

ಕೊಡವರು ತಮ್ಮ ಹಬ್ಬಗಳಾದ ಕೈಲುಮೂಹೂರ್ತ, ಕಾವೇರಿ ಸಂಕ್ರಮಣ, ಹುತ್ತರಿ ಹಬ್ಬಗಳನ್ನು ಬಿಟ್ಟರೆ ಇತರೆ ಸಮಾಜದ ಯಾವುದೇ ಹಬ್ಬಗಳನ್ನು ಆಚರಿಸುವುದಿಲ್ಲ. ಸಾಂಸ್ಕೃತಿಕ ಕೊಡುಕೊಳ್ಳುವಿಕೆ ಕೊಡವರಲ್ಲಿಯೂ ನಡೆದಿರುವುದರಿಂದ ಕೊಡವೇತರ ಸಮೂದಾಯದ ಹಬ್ಬಗಳಾದ ಯುಗಾದಿ, ದೀಪಾವಳಿ, ಗಣೇಶಚತುರ್ಥಿಗಳನ್ನು ಆಚರಿಸುತ್ತಾರೆ. ಈ ಭಾಷಿಕರು ಅವರದೇ ಆದ ದೇವಾಲಯಗಳನ್ನು ಹೊಂದಿರದಿದ್ದರೂ ತಮ್ಮ ವಾಸ ಪ್ರದೇಶಕ್ಕೊಂದು ಕೈಮಡ ಹೊಂದಿದ್ದು ಅಲ್ಲಿ ಹೆಚ್ಚಿನ ಮಟ್ಟಿಗೆ ಕೊಡವರೇ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ. ‘ಗುರು’ ಅಥವಾ ‘ಕಾರೋಣ’ ಎಂದು ಪ್ರತಿ ಕುಟುಂಬದ ಮೂಲ ಪುರುಷನಿಗೆ ಹೇಳುತ್ತಾರೆ. ಈ ಕಾರೋಣನಿಗೆ ‘ಕೈಮಡ’ವೂ ಇದೆ. ಇದು ಕೊಡವರಿಗೆ ದೇವಸ್ಥಾನ ಸಮಾನವಾಗಿದೆ. ಕೊಡವರು ಧಾರ್ಮಿಕ ಶ್ರದ್ಧೆ ಹೊಂದಿರುವವರು. ಬುಡಕಟ್ಟು ಜನಾಂಗದ ಗುಣಹೊಂದಿರುವ ಕೊಡವರು ಮೂಲತಃ ಪ್ರಕೃತಿಯ ಆರಾಧಕರಾದರೂ ಭಕ್ತಿ ಮತ್ತು ನಂಬಿಕೆಯನ್ನು ದೈವಗಳಲ್ಲಿ ಇರಿಸಿಕೊಂಡಿದ್ದಾರೆ. ಕಾವೇರಿ, ಭಗವತಿ, ಇಗ್ಗುತಪ್ಪ, ಅಯ್ಯಪ್ಪ, ಬೀರ, ಚವುಂಡಿ, ಗಣಪತಿ, ಸುಬ್ರಮಣ್ಯ, ಗುಳಿಕ, ಮುಂತಾದ ದೈವಗಳ ಮೇಲೂ ನಂಬಿಕೆ ಇರಿಸಿಕೊಂಡಿದ್ದಾರೆ. ಕೊಡವರು ಸಂಪ್ರದಾಯದ ಹೊರತಾಗಿ ಜೀವನ ನಡೆಸುವುದಿಲ್ಲ. ಆರ್ಥಿಕವಾಗಿ ಮುಂದುವರೆದಿದ್ದರೂ

ಸಂಪ್ರದಾಯ ಆಚರಣೆಗಳನ್ನು ಬಿಡದೆ ಪಾಲಿಸಿಕೊಂಡು ಬಂದವರಾಗಿದ್ದಾರೆ. ಮಗುವಿನ ಜನನ, ಋತುಮತಿಗೆ ಸಂಬಂಧಿಸಿದ ಆಚರಣೆ, ವೇಷಭೂಷಣ, ಆಭರಣಗಳು, ವಿವಾಹ ಪದ್ಧತಿ, ಬಸಿರು ಬಾಣಂತನ, ನಾಮಕರಣ, ಸಾವಿನ ಬಳಿಕದ ಆಚರಣೆ ಇತ್ಯಾದಿಗಳು ಕೊಡವರ ವಿಶೇಷ ಸಂಪ್ರದಾಯಗಳಾಗಿ ಕಂಡುಬರುತ್ತದೆ.

ಕೊಡವ ಭಾಷೆಯು ಲಿಪಿರಹಿತ ಭಾಷೆ. ಕನ್ನಡ ಭಾಷೆಯ ಲಿಪಿಯನ್ನು ಅವಲಂಭಿಸಿದೆ. ಕೊಡವ ಭಾಷೆಯಲ್ಲಿ ಅಪ್ಪಚ್ಚು ಕವಿಯವರ 'ನಾಲ್‌ನಾಟಕ' ಪುಸ್ತಕವು ಪೂರ್ತಿಯಾಗಿ ಕೊಡವ ಭಾಷೆ ಕನ್ನಡ ಲಿಪಿಯಿಂದ ಕೂಡಿದೆ. 'ಪಟ್ಟೋಲೆಪಳಮೆ' ಕೊಡವ ಭಾಷೆ ಹಾಗೂ ಕನ್ನಡ ಲಿಪಿಯಿಂದ ಕೂಡಿದೆ. ಕನ್ನಡ ಭಾಷೆಯ ಲಿಪಿಯಿಂದ ಅನೇಕ ಕೊಡವ ಗ್ರಂಥಗಳು ರಚನೆಯಾಗಿದೆ. ಹಾಗು ಈ ಭಾಷೆಯ 'ಬ್ರಹ್ಮಗಿರಿ', 'ತೂಕ್‌ಬೊಳಕ್' ಇತ್ಯಾದಿ ಹೆಸರಿನ ವಾರಪತ್ರಿಕೆಗಳು ಕೊಡವ ಭಾಷೆ ಕನ್ನಡ ಲಿಪಿಯಿಂದ ಪ್ರಕಟವಾಗುತ್ತಿವೆ. ಕೊಡವ ಸಾಹಿತ್ಯ ಆಕಾಡೆಮಿಯನ್ನು ಹೊಂದಿದ್ದು ಕೊಡಗಿನ ಸಾಹಿತ್ಯವನ್ನು ಪ್ರೋತ್ಸಾಹಿಸುವ ಹಾಗೂ ರಕ್ಷಿಸುವ ಗುರಿಯನ್ನು ಹೊಂದಿದೆ. ಕೊಡವರು ಶಿಕ್ಷಣವನ್ನು ಕನ್ನಡ ಭಾಷೆಯಲ್ಲಿಯೇ ಪಡೆಯುತ್ತಾರೆ. ಕೊಡವ ಭಾಷೆಯನ್ನು ಬೋಧಿಸುವ ಯಾವುದೇ ಸ್ವಯಂಸಂಸ್ಥೆಗಳನ್ನು ಹೊಂದಿಲ್ಲ. ಕೊಡವ ಭಾಷಿಕರ ಸಂಖ್ಯೆಯೂ ಕಡಿಮೇ ಇದ್ದು ಈಗಾಗಲೇ ವಿಶ್ವಸಂಸ್ಥೆ ಕೊಡವ ಭಾಷೆಯನ್ನು ಅಪಾಯದ ಅಂಚಿನಲ್ಲಿರುವ ಭಾಷೆಯೆಂದು ಗುರುತಿಸಿದೆ. ಕೊಡವರು ಆಧುನಿಕರಾಗುವ ಧಾವಂತದಲ್ಲಿ ತಮ್ಮ ವಿಶಿಷ್ಟ ಭಾಷೆ ಹಾಗೂ ಸಾಂಸ್ಕೃತಿಕ ಅನನ್ಯತೆಯನ್ನು ಮರೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಕೊಡವ ಜಾನಪದವೂ ಆ ಜನಾಂಗದ ಜ್ಞಾನ ಪರಂಪರೆಯನ್ನು ತಲೆಮಾರಿನಿಂದ ತಲೆಮಾರಿಗೆ ವರ್ಗಾಹಿಸಿ ಪಾರಂಪರಿಕ ಜ್ಞಾನವನ್ನು ತನ್ನ ಸಮೂದಾಯಕ್ಕೆ ಒದಗಿಸುತ್ತಾ ಬಂದಿದೆ. ಇಷ್ಟಾಗಿಯೂ ಕೊಡವರು ಇಂಗ್ಲಿಷ್ ಶಿಕ್ಷಣ ಪಡೆದು ಸರ್ಕಾರಿ ನೌಕರಿ ಹಾಗೂ ಭಾರತೀಯ ಸೇನೆಯಲ್ಲಿ ಆಸಕ್ತಿ ಉಳ್ಳವಾಗಿದ್ದಾರೆ. ವಿದೇಶಿ ಆಕರ್ಷಣೆ ಇದ್ದು ಹಲವು ಕೊಡವರು ವಿದೇಶದಲ್ಲಿ ನೆಲೆಸಿದ್ದಾರೆ.

ಕೊಡವರ ಮೌಖಿಕ ಸಾಹಿತ್ಯದ ಸ್ವರೂಪ:

ಕೊಡವ ಜನಪದರ ಸಾರವತ್ತಾದ ಅನುಭವಗಳು ಜನಪದ ಸಾಹಿತ್ಯದಲ್ಲಿ ಸಾಕಷ್ಟು ದೊರೆಯುತ್ತದೆ. ತಮ್ಮ ಕೆಲಸಕಾರ್ಯಗಳ ಜೊತೆಜೊತೆಗೆ ತಮ್ಮ ನೋವು-ನಲಿವುಗಳನ್ನು, ಆಸೆ-ಅಕಾಂಕ್ಷೆಗಳನ್ನು, ಭಯ-ಭಕ್ತಿಯನ್ನು ಹಾಡು ಅಥವಾ ಕುಣಿತಗಳ ಮೂಲಕ ಅಭಿವ್ಯಕ್ತಿಸುತ್ತಾ

ಬಂದಿದ್ದಾರೆ. ಗ್ರಾಮೀಣ ಸಂಸ್ಕೃತಿಯ ವಿವಿಧ ಮುಖಗಳನ್ನು ಬಿಂಬಿಸುವ ಜನಪದ ಸಾಹಿತ್ಯ ಕೊಡವರಲ್ಲಿಯೂ ಹೇರಳವಾಗಿದೆ, ಕೊಡವ ಜಾನಪದವನ್ನು ಜನಪದ ಸಾಹಿತ್ಯ, ಭೌತಿಕ ಸಂಸ್ಕೃತಿ, ಸಾಮಾಜಿಕ ಆಚರಣೆಗಳು ಮತ್ತು ಹಬ್ಬಗಳು ಹಾಗೂ ರಂಗಪ್ರದರ್ಶನಗಳು ಎಂದೂ ವರ್ಗೀಕರಿಸಿಕೊಳ್ಳಬಹುದು. ಪ್ರಸ್ತುತ ಮಹಾಪ್ರಬಂಧದ ಅಧ್ಯಯನಕ್ಕೆ ಕೊಡವ ಜನಪದದಲ್ಲಿ ವ್ಯಕ್ತವಾಗಿರುವ ಕೊಡವರ ಲೋಕದೃಷ್ಟಿಯ ಸ್ವರೂಪವನ್ನು ವಿವರಿಸಿಕೊಳ್ಳಲು ಕೊಡವರ ಜನಪದ ಸಾಹಿತ್ಯ, ಭೌತಿಕ ಸಂಸ್ಕೃತಿಗಳು, ಸಾಮಾಜಿಕ ಆಚರಣೆಗಳನ್ನು ಹಾಗೂ ಪ್ರದರ್ಶನ ಕಲೆಗಳನ್ನು ಮುಖ್ಯ ಆಕರವಾಗಿ ಬಳಸಿಕೊಳ್ಳಲಾಗಿದೆ.

ಪಾಟ್:

ಇದು ಕೊಡವ ಭಾಷೆಯ ಜನಪದ ಗೀತೆಗಳು. ಪಾಟ್ ಎಂದರೆ ಹಾಡು ಅಥವಾ ಗೀತೆ. ಇದು ಮಲೆಯಾಳಂ ಪದ. ನಡಿಕೇರಿಯಂಡ ಚಿಣ್ಣಪ್ಪ ಅವರ 'ಪಟ್ಟೋಳೆ ಪಳಮೆ'ಯಲ್ಲಿ ಪ್ರಕಟಿತವಾಗಿರುವ ಮಂಗಳಪಾಟ್, ಬಾಳೋಪಾಟ್, ಪುತ್ತರಿಪಾಟ್, ಚಾವು ಪಾಟ್, ಎವ್ವ ಮಕ್ಕ ದೇಬುಡ ಪಾಟ್, ಅಜ್ಜಯ್ಯಂಡ ಪಾಟ್, ಶಾಸ್ತಾವುಡ ಪಾಟ್, ಇವುಗಳು ಸಾಲುಗಳ ಸಂಖ್ಯೆಯಲ್ಲಿ ಸಾಮಾನ್ಯ ಜನಪದ ಹಾಡುಗಳಿಂದ ಹೆಚ್ಚು ಸಾಲುಗಳನ್ನು ಹೊಂದಿದೆ. 'ಮಹಾಕಾವ್ಯಗಳೆಂದು ಕರೆಯಲು ಐವತ್ತು ಸಾಲಿಗಳಿಂದ ಹೆಚ್ಚಿರಬೇಕು'[೬] ಎಂದು ಭಾವಿಸಿದರೆ ಕೊಡಗಿನ ಈ ಪಾಟ್‌ಗಳು ಮಹಾಕಾವ್ಯಗಳ ಸಾಲಿಗೆ ಸೇರುತ್ತವೆ. ಖಂಡಕಾವ್ಯ, ಮಹಾಕಾವ್ಯ, ಐತಿಹ್ಯ, ಪುರಾಣ, ಆರಾಧನಾ ಪಠ್ಯ, ಸಾಂಸ್ಕೃತಿಕ ಪಠ್ಯ ಹೀಗೆ ಅನೇಕ ನೆಲೆಗಳಿಂದ ಈ ಪಾಟ್‌ಗಳನ್ನು ಪರಿಭಾವಿಸಿಕೊಳ್ಳಬಹುದು. ಕೊಡವರು ಪಟ್ಟೋಲೆ ಪಳಮೆಯಲ್ಲಿರುವ ಪಾಟ್‌ಗಳನ್ನೇ ಪ್ರದರ್ಶನ ಸಂದರ್ಭದಲ್ಲಿ ಹಾಡುತ್ತಾರೆ. ಕೊಡವರ ಜನಪದ ಕಾವ್ಯಗಳು ಕಟ್ಟಿಕೊಡುವ ಕೊಡವರ ಸಾಂಸ್ಕೃತಿಕ ಇತಿಹಾಸದ ಮರುರಚನೆಗೆ ಸಹಕಾರಿಯಾಗಿದೆ.

ಇಂಗ್ಲಿಷ್‌ನಲ್ಲಿ 'ಒರಲ್ ಎಫಿಕ್' ಎಂಬದಕ್ಕೆ ಕನ್ನಡದಲ್ಲಿ 'ಮೌಖಿಕ ಪುರಾಣ' ಅಥವಾ ಮೌಖಿಕ ಮಹಾಕಾವ್ಯ ಎಂಬ ಸಂವಾದಿ ಪದ ಬಳಕೆ ಇದೆ. ಕನ್ನಡದಲ್ಲಿ ಪುರಾಣ ಅಥವಾ ಮಹಾಕಾವ್ಯ ಎಂದು ಕರೆಯುವ ಜನಪದ ಕಾವ್ಯ ಪ್ರಕಾರಗಳೂ ರೂಢಿಯಲ್ಲಿದೆ. ಜುಂಜಪ್ಪನ ಕಾವ್ಯ, ಮಲೆಮಹಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ ಇತ್ಯಾದಿಗಳು ಜನಪದ ಪುರಾಣಗಳೆಂದು ಕರೆಯಿಸಿಕೊಂಡಿವೆ. ಕೊಡಗಿನ ನೆರೆಯ ಜಿಲ್ಲೆಯಾದ ತುಳುನಾಡಿನ ಜನಪದದಲ್ಲಿ ಸಂಧಿ, ಪಾಡ್ದನ ಎಂದು ಕರೆಯುವ ಕೋಟಿಚೆನ್ನಯ್ಯ ಸಂಧಿ, ಸಿರಿಸಂಧಿ ಇತ್ಯಾದಿಗಳು ತುಳು ಜನಪದ ಮೌಖಿಕ ಕಾವ್ಯ ಎಂದು ಗುರುತಿಸಿಕೊಂಡಿದೆ. ಕೊಡವ

ಮೌಖಿಕಪುರಾಣಗಳು ಗೆರೆಗಳ ದೃಷ್ಟಿಯಿಂದ ಜನಪದ ಹಾಡುಗಳಿಗಿಂತ ವಿಸ್ತಾರವಾಗಿಯೇ ಇದೆ. ಕೊಡವ ಭಾಷೆಯಲ್ಲಿ 'ಪಾಟ್' ಎಂದು ಕರೆದರೂ ಇದು ಮಹಾಕಾವ್ಯದ ಸ್ವರೂಪವನ್ನು ಹೊಂದಿದೆ. ಪಾಟ್‌ಗಳಲ್ಲಿ ಕಾರೋಣ, ಕುಟುಂಬದ ಹಬ್ಬಹರಿದಿನ, ಆಚರಣೆ, ಪದ್ಧತಿ, ಭೌಗೋಳಿಕ ಪರಿಸರ, ದೇವ ನೆಲೆ, ಇತ್ಯಾದಿಗಳ ದೀರ್ಘ ವಿವರಗಳೂ ಸಿಗುತ್ತದೆ. ಬಹಳ ಮುಖ್ಯವಾಗಿ ಪಾಟ್‌ಗಳಿಗೆ ಆಚರಣಾತ್ಮಕ ಸಂದರ್ಭಗಳಿವೆ. ಸಾಮಾಜಿಕ, ರಾಜಕೀಯವಾದ ಸಂಘರ್ಷಗಳಿಗೆ ಸಂಬಂಧಿಸಿದ ವಿವರಗಳು ಕೊಡವ ಪಾಟ್‌ಗಳಲ್ಲಿ ವರ್ಣಿತವಾಗಿದೆ. ಈ ವಿಶೇಷ ಲಕ್ಷಣಗಳನ್ನು ಹೊಂದಿರುವ ಕೊಡವ ಪಾಟ್‌ಗಳನ್ನು ಹಾಗೂ ಕೊಡವ ಜನಪದರ ಮೌಖಿಕ ಮಹಾಕಾವ್ಯಗಳಾಗಿ ಅಭ್ಯಸಿಸಬಹುದು. ಕೊಡಗಿನಲ್ಲಿ ರೂಢಿಯಲ್ಲಿರುವ 'ತೆರೆಕಟ್ಟುವೊ' ಅಥವಾ ಕೋಲ ಕೊಡುವಾಗ ಹಾಡುವ ಈ ಪಾಟ್‌ಗಳಲ್ಲಿ ದೈವದ ಚರಿತ್ರೆಗಳಿವೆ. ಕಲಿಯಾಟಂಡ ಅಜ್ಜಪ್ಪನ ಕೋಲದಲ್ಲಿ ಅಜ್ಜಪ್ಪನ ಸಾಹಸ, ಕುಟುಂಬದ ಅಭಿವೃದ್ಧಿಗೆ ಶ್ರಮಿಸಿದ ವಿವರ, ಬೇಟೆ, ಯುದ್ಧ, ಸ್ವಾಮಿನಿಷ್ಠೆ ಇತ್ಯಾದಿ ವಿವರಗಳು ವಿಸ್ತಾರವಾಗಿ ಪ್ರಸ್ತಾಪವಾಗಿದೆ.

ನಾಟಿ ಗದ್ದೆಗಳಲ್ಲಿ ಹಾಡುವ 'ಒಯ್ಯಕಾಕುವ' ಹಾಡಿನಲ್ಲಿ ಭತ್ತದ ಎಳೆಯ ಸಸಿಗಳನ್ನು ಕೀಳುವ ಹಾಗೂ ನೆಡುವ ಕ್ರಿಯೆಗಳನ್ನು ಒಂದು ಆಚರಣೆಯಾಗಿ ಪರಿಗಣಿಸಲಾಗಿದೆ. ಕೊಡವರ ಚಾವು ಪಾಟ್ ನಲ್ಲಿ ವ್ಯಕ್ತಿಯ ಜೀವನಗಾಥೆಯನ್ನು ಹಾಡುತ್ತಾರೆ. ಒಟ್ಟು ಕೊಡವ ಜನಪದ ಪಾಟ್‌ಗಳನ್ನು ಲೌಕಿಕ ಮತ್ತು ಅಲೌಕಿಕ ಎಂದು ವಿಭಾಗಿಸಿಕೊಳ್ಳಬಹುದು. ಎವ್ವಮಕ್ಕ ದೇಬುಡ ಪಾಟ್ ಇತ್ಯಾದಿಗಳು ಪ್ರಕೃತಿ ಆರಾಧನೆಯನ್ನು ರೂಢಿಸಿಕೊಂಡಿದ್ದ ಕೊಡಗಿಗೆ ದೇವತೆಗಳ ಆಗಮನದ ವಿವರ ಮಾತ್ರವಲ್ಲದೆ ಅದು ಕೊಡಗಿನ ನೆರೆಹೊರೆ ಜಿಲ್ಲೆಗಳೊಂದಿಗಿನ ಸಾಂಸ್ಕೃತಿಕ ಕೊಡುಕೊಳ್ಳುವಿಕೆಯ ವಿವರಗಳನ್ನೂ ಹೊಂದಿದೆ. ಲೌಕಿಕವಾದ ಹುತ್ತರಿ ಪಾಟ್, ಬಟ್ಟೆ ಪಾಟ್, ಬಾಳೋ ಪಾಟ್, ದೇಶಕಟ್ಟ್ ಪಾಟ್, ಮಂಗಲ ಪಾಟ್ ಇತ್ಯಾದಿಗಳಲ್ಲಿ ಕೊಡಗಿನ ಸಾಂಸ್ಕೃತಿಕ ಇತಿಹಾಸದ ವಿವರಗಳು ಲಭ್ಯವಾಗುತ್ತದೆ.

ಕೊಡವರ ಜನಪದ ಪಾಟ್‌ಗಳು ಕೊಡಗಿನ ಸಂಸ್ಕೃತಿಯ ಐತಿಹಾಸಿಕ ದಾಖಲೆಯನ್ನು ನೀಡುವ ದೃಷ್ಟಿಯಿಂದ ಮುಖ್ಯವಾಗಿದೆ. ಪ್ರಾಚೀನ ಕೊಡಗಿನ ಭಿನ್ನ ಭಿನ್ನ ವರ್ಗ, ಜಾತಿಯ ಜನರು, ವ್ಯವಸಾಯ ಪದ್ಧತಿ, ಆಡಳಿತ ಪದ್ಧತಿ, ಕ್ರೀಡೆ, ಯುದ್ಧ, ಬೇಟೆ, ವಾಣಿಜ್ಯ ವ್ಯವಹಾರ, ಉಡುಗೆ–ತೊಡುಗೆಗಳು, ಕಂದಾಯ ಪದ್ಧತಿ, ಸಾರಿಗೆ ಪದ್ಧತಿ, ವಿದ್ಯಾಭ್ಯಾಸದ ಕ್ರಮ, ಧರ್ಮಗಳ ನೀತಿ, ನಂಬಿಕೆ, ಕೌಟುಂಬಿಕ ವ್ಯವಸ್ಥೆ ಇಂತಹ ಅನೇಕ ವಿಷಯಗಳ ಮಾಹಿತಿಗಳನ್ನು ಕೊಡವ ಜನಪದ ಪಾಟ್‌ಗಳಿಂದ ಪಡೆಯಬಹುದು. ಅವುಗಳು ಕಟ್ಟಿಕೊಡುವ ಸಾಂಸ್ಕೃತಿಕ ಇತಿಹಾಸ

ಮತ್ತು ಸಾಮಾಜಿಕ ಧ್ವನಿಗಳಾಗಿವೆ. ಕೊಡವ ಜನಪದ ಪಾಟ್‌ಗಳನ್ನು ಒಂದು ಸಮಾಜದ, ಜನಾಂಗದ ರಾಜಕೀಯ ಇತಿಹಾಸ ರಚನೆಗೆ ಹಾಗೂ ಸಾಮಾಜಿಕ ಸಾಂಸ್ಕೃತಿಕ ಇತಿಹಾಸದ ಪುನರ್ ರಚನೆಗೆ ಹೆಚ್ಚು ಅಧ್ಯಯನ ಪೂರ್ಣವಾಗಿ ಗಮನಿಸಬಹುದು. ಈ 'ಪಾಟ್'ಗಳು ತೆರೆದಿಡುವ ಕೊಡವ ಜನಪದ ಲೋಕದೃಷ್ಟಿಯನ್ನು ಹೆಚ್ಚು ಸಮರ್ಪಕವಾಗಿ ಗ್ರಹಿಸಿಕೊಳ್ಳಬಹುದು.

ಕುಣಿತಗಳು:

ಪ್ರದರ್ಶನ ಕಲೆಗಳಲ್ಲಿ ಜನಪದ ಕುಣಿತಗಳೂ ಕೂಡ ಒಂದು ಮುಖ್ಯವಾದ ಪ್ರಕಾರ. ಭಾಷಿಕವಾಗಿ, ಜನಾಂಗಿಕವಾಗಿ ಮತ್ತು ಸಾಂಸ್ಕೃತಿಕವಾಗಿ ವೈವಿದ್ಯಮಯವಾಗಿರುವ ಕೊಡಗಿನ ಅತ್ಯಂತ ಶ್ರೀಮಂತ ಪರಂಪರೆಯೆಂದರೆ ಕುಣಿತಗಳು. ಕುಣಿತಗಳ ದೃಷ್ಟಿಯಿಂದ ಕೊಡಗಿನ ಕೊಡವ ಹಾಗೂ ಕೊಡವೇತರ ಜನಾಂಗಗಳು ಗಮನ ಸೆಳೆಯುತ್ತವೆ. ಈ ಜನಾಂಗಗಳ ಕುಣಿತಗಳನ್ನು ಆಧರಿಸಿ, ಈ ಪ್ರದೇಶದ ಒಟ್ಟು ಸಾಂಸ್ಕೃತಿಕ ಸ್ವರೂಪವನ್ನು ತಿಳಿಯಲು ಸಾಧ್ಯವಿದೆ. ಕೊಡಗಿನಲ್ಲಿ ಕೊಂಬಾಟ್, ಬೊಳ್ಕಾಟ್, ಪೀಲಿಯಾಟ್ ಹೀಗೆ ಹಲವಾರು ಕುಣಿತಗಳಿವೆ. ಕೊಡಗಿನಲ್ಲಿ ಆಚರಣೆಯ ಸಂದರ್ಭದಲ್ಲಿ ಕುಣಿಯುವ ಕುಣಿತಗಳಲ್ಲಿ ಎಲ್ಲರೂ ಊರಮಂದ್‌ನಲ್ಲಿ ಸೇರಿ ದುಡಿ ಹಾಡುಗಳೊಂದಿಗೆ ಕುಣಿಯುವ ಮೂಲಕ ಸಂಭ್ರಮಿಸುತ್ತಾರೆ. ಕೊಡಗಿನ ದುಡಿಕೊಟ್ಟ್ ಪಾಟ್ ಹಾಗೂ ಕುಣಿತ ಪ್ರಸಿದ್ಧವಾದುದು. ಕುಣಿತಗಳ ಸಾರ್ವತ್ರಿಕ ಆಶಯ ಒಂದೆ. ಅವರು ಧರಿಸುವ ವೇಷಭೂಷಣಗಳು ಒಂದೇ ತೆರನಾಗಿರುತ್ತದೆ. ಕುಣಿತಗಳು ನಡೆಯುವ ಪ್ರದೇಶದ ಜನಜೀವನ ಸಂಸ್ಕೃತಿ ಮತ್ತು ಅಲ್ಲಿ ದೊರೆಯುವ ಪರಿಸರಗಳನ್ನು ಹೊಂದಿಕೊಂಡೇ ಇರುತ್ತದೆ.

ಕುಣಿತಗಳಲ್ಲಿ ಭಾಗವಹಿಸುವ ಸಂಖ್ಯೆ ಇಂತಿಷ್ಟೇ ಇರಬೇಕೆಂಬ ನಿಯಮವಿಲ್ಲ. ಸಾರ್ವತ್ರಿಕವಾಗಿ ಯಾವುದೇ ನಿಯಮಗಳಿಗೆ ಬದ್ಧರಾಗಿರುವುದಿಲ್ಲ. ಜನಪದ ಕುಣಿತಗಳು ಮುಕ್ತ ಬಂಧವನ್ನು ಹೊಂದಿದೆ. ಕ್ರಿಯಾತ್ಮವಾಗಿಯೂ ಇರುತ್ತದೆ. ಮಾತಿಗಿಂತ ಆಂಗಿಕ ಚಲನೆ, ಹಾವಭಾವ ನಾಟಕೀಯತೆಗಳು ಹೆಚ್ಚಾಗಿರುತ್ತದೆ. ಕೊಡಗಿನ ಕುಣಿತಗಳು ಧಾರ್ಮಿಕ ಆಚರಣಾತ್ಮಕ ಸಂಬಂಧಗಳನ್ನು ಹೊಂದಿದೆ. ಆರಾಧನಾ ಕುಣಿತ ಹಾಗೂ ಆಚರಣಾತ್ಮಕ ಕುಣಿತಗಳಲ್ಲಿ ಕೆಲವೊಂದು ಧಾರ್ಮಿಕ ಆಚರಣೆಗಳನ್ನು ನಡೆಸಲಾಗುತ್ತದೆ. ಆಚರಣೆಯು ಸ್ಥಳೀಯ ಸಂಸ್ಕೃತಿಗೆ ಅನುಸಾರವಾಗಿಯೇ ಇರುತ್ತದೆ. ಕುಣಿತಗಳನ್ನು ಜನಪದರು ಕೇವಲ ಮನೋರಂಜನೆಗಾಗಿ ಮಾತ್ರವೇ ಸೃಷ್ಟಿಸಿಕೊಂಡರು ಎಂಬ ಗ್ರಹಿಕೆಯ ಜೊತೆಗೆ ಕುಣಿತಗಳ ಪ್ರದರ್ಶನದ ನಿರ್ದಿಷ್ಟಕಾಲ,

ನಿರ್ದಿಷ್ಟವಾದ ಸ್ಥಳ, ನಿರ್ದಿಷ್ಟವಾದ ಆವರಣ ಮತ್ತು ಪರಿಸರಗಳಲ್ಲಿ ಮತ್ತು ನಿರ್ದಿಷ್ಟ ಆಚರಣೆಯ ಸಂಬಂಧವಾಗಿಯೇ ಪ್ರದರ್ಶಿತವಾಗುವುದು.

ಸಂವಹನ ಮಾಡುವ ಉದ್ದೇಶವೂ ಈ ಕುಣಿತಗಳಲ್ಲಿ ಇರುತ್ತದೆ. ಅರ್ಥ ಮತ್ತು ಕುಣಿತದ ಉದ್ದೇಶವನ್ನು ಸ್ವೀಕರಿಸುವ ಪ್ರೇಕ್ಷಕ ವರ್ಗವೂ ಇರುತ್ತದೆ. ಆದ್ದರಿಂದ ಕುಣಿತಗಳು ಜನಪದರೂ ರೂಢಿಸಿಕೊಂಡ ಸಂವಹನ ಮಾಧ್ಯಮವೂ ಆಗಿರುತ್ತದೆ. ಬರಹ ಜಗತ್ತಿನಿಂದ ದೂರ ಉಳಿದಿದ್ದ ಕಾಲದ ಜನಪದರು ಅಕ್ಷರ ಮತ್ತು ಭಾಷಾ ಮಾಧ್ಯಮಕ್ಕೆ ಬದಲಾಗಿ ಕುಣಿತಗಳನ್ನು ರೂಢಿಸಿಕೊಂಡಿರಬಹುದು. ಕುಣಿತಗಳ ಮೂಲಕ ಸಂವಹನ ಮಾಡುವ ಪ್ರಯತ್ನವನ್ನು ಮಾಡಿದ್ದಾರೆ. ತಮ್ಮ ಆಲೋಚನೆ, ಭಾವನೆ, ಪ್ರತಿಭಟನೆ, ವಿರೋಧ, ಸಂತೋಷಗಳನ್ನು ಕುಣಿತಗಳ ಮೂಲಕವೂ ಪ್ರಕಟಪಡಿಸಿದ್ದಾರೆ. ಕೊಡಗಿನಲ್ಲಿ ಪ್ರಟವಾಗುತ್ತಿರುವ ಪಾಟ್, ಕತೆ, ಗಾದೆ, ಒಗಟು, ಐತಿಹ್ಯ ಇಷ್ಟೆ ಅಲ್ಲದೆ ಜನಪದ ಆಟ, ಕ್ರೀಡೆ, ರಂಗ ಪ್ರದರ್ಶನ ಕಲೆ ಇತ್ಯಾದಿ ಜನಪದರು ತಮ್ಮ ಅಭಿಪ್ರಾಯಗಳನ್ನು ಆರಾಧನಾ ಸಂಬಂಧ ಕುಣಿತಗಳು (ಕೊಂಬಾಟ್, ಪೀಲಿಯಾಟ್, ಕೊಡಿಯಾಟ್, ಬೊಳಕಾಟ್, ಇತ್ಯಾದಿ), ಹಬ್ಬ ಆಚರಣಾ ಸಂಬಂಧಿತ ಕುಣಿತಗಳು (ಕೋಲಾಟ್, ಪರೆಯಕಳಿ, ಜೋಯಿಕಳಿ ಇತ್ಯಾದಿ) ವ್ಯವಸಾಯ ಮತ್ತು ಬೇಟೆ ಸಂಬಂಧಿತ ಕುಣಿತಗಳು (ಪುತ್ತರಿ ಕೋಲಾಟ್, ತೇನಾಟ್, ಕೊಂಬಾಟ್, ಸಿದ್ಧಿಯಾಟ್, ಕಪ್ಪೆಯಾಟ್ ಇತ್ಯಾದಿ) ಕುಟುಂಬ ಮನೋರಂಜನಾ ಸಂಬಂಧಿತವಾದ ಕುಣಿತಗಳು (ಮದುವೆ ಇತ್ಯಾದಿ ಸಂದರ್ಭದ ದುಡಿಕೊಟ್ಟ್ ಆಟ, ವಾಲಗತ್ತಾಟ್) ಎಂದು ಗುರುತಿಸಿಕೊಳ್ಳಬಹುದು. ಮಾನವೀಯ ಕಾಳಜಿಗಳನ್ನು ಉದ್ದೇಶವಾಗಿರಿಸಿಕೊಂಡ ಈ ಕುಣಿತಗಳು ಅಧ್ಯಯನ ಯೋಗ್ಯವಾದುವುಗಳು.

ಮೇಲ್ನೋಟಕ್ಕೆ ಮನೊರಂಜನೆಯ ಭಾಗವಾಗಿ ಕಂಡರೂ ಇವುಗಳ ಆಳವಾದ ಮತ್ತು ಸೂಕ್ಷ್ಮವಾದ ಅಧ್ಯಯನದಿಂದ ಇವು ಹೊಂದಿರುವ ಅರ್ಥ ಪದರಗಳನ್ನು ತಿಳಿಯಬಹುದು. ಈ ಕುಣಿತಗಳು ಕೊಡಗಿನ ಪ್ರಾದೇಶಿಕ ಸಾಂಸ್ಕೃತಿಕ ಪರಂಪರೆಯಾಗಿ ಕ್ರಿಯಾಶೀಲವಾಗಿದೆ. ಕುಣಿತಗಳ ಮೂಲಕ ತಮ್ಮ ಲೋಕದೃಷ್ಟಿಯನ್ನು ಸಾದರ ಪಡಿಸಿರುವುದನ್ನು ಗ್ರಹಿಸಬಹುದು. ಈ ಕುಣಿತಗಳು ಕೊಡಗಿನ ಪ್ರದೇಶದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಆಕರಗಳೂ ಆಗಿವೆ. ಜನಪದರ ಕುಣಿತಗಳನ್ನು ಪ್ರಬಲವಾದ ಸಂವಹನ ಮಾಧ್ಯಮಗಳೆಂಬುದಾಗಿ ಗ್ರಹಿಸಿದಾಗ ಮಾತ್ರ ಈ ಕುಣಿತಗಳನ್ನು ಗಂಭೀರವಾಗಿ ಪರಿಣಿಸಲು ಸಾಧ್ಯ.

ಭೌತಿಕ ಪರಿಕರಗಳು:

ಕೊಡವರ ಭೌತಿಕ ಸಂಪತ್ತು ಕೊಡವರ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಗ್ರಹಿಸಿಕೊಳ್ಳಲು ಪ್ರಮುಖ ಆಕರಗಳಾಗಿವೆ. ಕೊಡವರ ಬದುಕಿನ ಭಾಗವಾಗಿರುವ ಐನ್‌ಮನೆ, ಕೈಮಡಗಳು, ದೇವರಕಾಡುಗಳು, ಕೊಡವರ ಉಡುಗೆ ತೊಡುಗೆಗಳು, ಬೇಟೆಸಂಬಂಧಿತ ಸಾಧನಗಳು, ವ್ಯವಸಾಯ ಸಂಬಂಧಿತ ಸಲಕರಣೆಗಳ ಮೇಲಿರುವ ಕೊಡವರ ನಂಬಿಕೆ ಹಾಗೂ ಆರಾಧನಾ ಭಾವವನ್ನು ಗ್ರಹಿಸಿ ಕೊಡವರ ಲೋಕದೃಷ್ಟಿಗೆ ಪೂರಕವಾದ ಅಂಶಗಳನ್ನು ಮುಖ್ಯವಾಗಿ ಪರಿಗಣಿಸಲು ಸಾಧ್ಯ. ಬೆಟ್ಟಗುಡ್ಡಗಳ ನಡುವೆ ಬದುಕಿದರೂ ದೇವರಕಾಡನ್ನು ರಕ್ಷಿಸಿಕೊಳ್ಳುತ್ತಾ ಬಂದಿರುವುದನ್ನು ಮುಖ್ಯವಾಗಿ ಪರಿಗಣಿಸಬಹುದು. ಇವೆಲ್ಲವೂ ಸಂಶೋಧನಾ ಕುತೂಹಲವನ್ನು ಹೊಂದಿರುವುದರಿಂದ ಅಧ್ಯಯನಕ್ಕೆ ಆಕರವಾಗಿ ಬಳಸಿಕೊಳ್ಳಲಾಗಿದೆ.

ಕೊಡವ ಲೋಕದೃಷ್ಟಿಯ ಅಧ್ಯಯನದ ಸಂದರ್ಭದಲ್ಲಿ ಕೊಡಗಿನ ಕುರಿತಾದ ಮೌಖಿಕ ಪುರಾಣಗಳು, ಐತಿಹ್ಯಗಳು ಗಾದೆ ಇತ್ಯಾದಿಗಳನ್ನು ಅಧ್ಯಯನಕ್ಕೆ ಆಕರವಾಗಿ ಬಳಸಿಕೊಳ್ಳಲಾಗಿದೆ.

ಕೊಡಗಿನಲ್ಲಿ ಇತರೆಲ್ಲಾ ಕೊಡವ ಭಾಷಿಕರಿಗಿಂತ ಕೊಡವರು ಮಾತ್ರ ಸಾಂಘಿಕವಾಗಿ ಪ್ರಬಲರು. ಇವರು ತಮ್ಮದೇ ಆದ ಸಂಘಸಂಸ್ಥೆಗಳನ್ನು, ಕೊಡವ ಸಮಾಜವನ್ನು ಹೊಂದಿದ್ದಾರೆ. ಈ ಸಂಸ್ಥೆಗಳು ಮುಖ್ಯವಾಗಿ ಕೊಡವರ ಒಗ್ಗಟ್ಟು, ಸಂಸ್ಕೃತಿ ಹಾಗೂ ಏಳಿಗೆಗೆ ರಚನೆಗೊಂಡಹಾಗಿದೆ. ಸಂಸ್ಥೆಗಳು ಮುಖ್ಯವಾಗಿ ಪಟ್ಟಣ ಪ್ರದೇಶಗಳಲ್ಲಿರುವುದರಿಂದ ಹಳ್ಳಿ ಪ್ರದೇಶಗಳಲ್ಲಿ ನೆಲೆಸಿರುವ ಕೊಡವರಿಗೆ ಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದುವುದು ಸ್ವಲ್ಪ ತ್ರಾಸದಾಯಕವಾಗಿದೆ. ಕೊಡವರು ಕೊಡಗಿನ ಸಾಮಾಜಿಕ ಹಾಗು ರಾಜಕೀಯ ಸಂಸ್ಥೆಗಳಲ್ಲಿ ಮುಖಂಡರಾಗಿ ಭಾಗವಹಿಸುವ ಅವಕಾಶವನ್ನು ಹೊಂದಿದ್ದಾರೆ. ಕೊಡವ ಮಾತೃ ಭಾಷಿಕರಾದ ಕೊಡವರು ತಾವು ಬುಡಕಟ್ಟು ಜನಾಂಗದ ಮೂಲಕ ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳುವ ಸಲುವಾಗಿ ಸರಕಾರಕ್ಕೆ ಒತ್ತಾಯವನ್ನು ತಂದು ಸಮೀಕ್ಷೆಯನ್ನು ಮಾಡಲು ಒತ್ತಾಯಿಸಿದ್ದಾರೆ. ಆ ಮೂಲಕ ತಮ್ಮ ಜನಾಂಗದ ವೈಶಿಷ್ಟ್ಯಪೂರ್ಣವಾದ ಮೌಖಿಕ ಹಾಗೂ ಭೌತಿಕ ಪರಂಪರೆಗೆ ಮಾನ್ಯತೆಗಳಿಸಿ, ತಮ್ಮ ಅನನ್ಯ ಸಂಸ್ಕೃತಿಯನ್ನು ಸಂರಕ್ಷಣೆ ಮಾಡಿಕೊಳ್ಳುವ ಸಲುವಾಗಿ ಹಲವು ವರ್ಷಗಳಿಂದ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಬೇಡಿಕೆ ಇಡುತ್ತಲೇ ಬಂದಿದ್ದಾರೆ.

ಕೊಡವರ ಜನಪದದ ಕುರಿತು ಇದುವರೆಗೆ ನಡೆದ ಅಧ್ಯಯನದ ಸಮೀಕ್ಷೆ

ಕೊಡಗಿನ ಇತಿಹಾಸ, ಸಮಾಜ, ಜಾನಪದ ಸಂಸ್ಕೃತಿ, ಭೌಗೋಳಿಕ ಪರಿಸರ, ಆರ್ಥಿಕ ಸಂಗತಿ ಮೊದಲಾದವುಗಳ ಮೇಲೆ ೧೯ನೇಯ ಶತಮಾನದ ಪ್ರಾರಂಭದಿಂದ ಈವರೆಗೆ ಅನೇಕ ದೇಶಿ ಹಾಗೂ ವಿದೇಶಿ ವಿದ್ವಾಂಸರು ವಿವಿಧ ಆಯಾಮಗಳಿಂದ ಅಧ್ಯಯನ ನಡೆಸಿದ್ದಾರೆ. ಇಲ್ಲಿಯವರೆಗೆ ನಡೆದ ಪ್ರಮುಖ ಅಧ್ಯಯನಗಳನ್ನು ಇಲ್ಲಿ ಹೀಗೆ ಅವಲೋಕನ ಮಾಡಿಕೊಳ್ಳಬಹುದು.

ಪಾಶ್ಚಿಮಾತ್ಯರ ಆಡಳಿತದ ಕಾಲದಲ್ಲಿ ಕೊಡಗನ್ನು ಕುರಿತು ಅಧ್ಯಯನ ಮಾಡಿದ ವಿದೇಶಿ ವಿದ್ವಾಂಸರು ಮಿಷನರಿಯ ಕಾರ್ಯಕರ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದವರು ಹಾಗೂ ಕಂಪನಿ ಸರ್ಕಾರದ ಸೇವೆಯಲ್ಲಿದ್ದವರು. ರಿಕ್ತರ್, ಹರ್ಮನ್ ಮೊಗ್ಲಿಂಗ್, ಬಿ.ಎಲ್. ರೈಸ್, ಇ. ಮಾರ್ಸ್ಡೆನ್, ಮುಂತಾದವರು ಪ್ರಮುಖರು. ಇವರೆಲ್ಲರ ಬರವಣಿಗೆ ಸಂಗ್ರಹ ಕುತೂಹಲದೃಷ್ಟಿಯಿಂದ ಕೂಡಿದೆ.

ಜಿ. ರಿಕ್ತರ್ ಬಾಸಲ್ ಮಿಷನರಿಯ ಮೂಲಕ ಕೊಡಗಿಗೆ ಬಂದವರು. ಇವರ 'ಗೆಜೆಟಿಯರ್ ಆಫ್ ಕೂರ್ಗ' (೧೮೭೦) ಕೊಡಗಿನ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ವಿಚಾರಗಳನ್ನು ದಾಖಲಿಸಿದೆ. ಕೊಡಗಿನ ಇತಿಹಾಸದ ಅಧ್ಯಯನ ಸಂದರ್ಭದಲ್ಲಿ ಈ ಕೃತಿ ಮಹತ್ವದ್ದು.

೧೮೭೮ರಲ್ಲಿ ರಚಿತವಾದ ಬಿ.ಎಲ್. ರೈಸ್‌ರ 'ಮೈಸೂರ್ ಆಂಡ ಕೂರ್ಗ ವಾಲ್ಯೂಮ್–೨' ಕೊಡಗಿನ ಸಮಗ್ರ ಚಿತ್ರಣವನ್ನು ಕಟ್ಟಿಕೊಡಬಲ್ಲ ಗ್ರಂಥವಾದರೂ ಕೊಡವರ ಜನಪದ ವಿಚಾರವನ್ನು ಮುಖ್ಯವಾಗಿ ಪರಿಗಣಿಸಿ ಅಧ್ಯಯನ ಮಾಡಿದ ಕೃತಿಯಾಗಿ ಕಾಣುವುದಿಲ್ಲ. ಇಲ್ಲಿ ಭೌಗೋಳಿಕ, ಚಾರಿತ್ರಿಕ, ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ ವಿಚಾರಗಳೇ ಪ್ರಮುಖ ಸ್ಥಾನ ಪಡೆದಿದೆ. ರೆ. ಹರ್ಮನ್ ಮೊಗ್ಲಿಂಗ್–ವೆಸ್ಲಿಯನ್ ಮಿಷಿನ್ ಮೂಲಕ ಕೊಡಗಿಗೆ ಬಂದವರು. ೧೮೫೫ರಲ್ಲಿ ರಚಿತವಾದ 'ಕೂರ್ಗ ಮೆಮೊರಿಯರ್ಸ್' ಕೃತಿ ಕೊಡಗಿನ ಸಮುದಾಯಗಳಲ್ಲಿನ ಆಚರಣೆ, ಹಬ್ಬಗಳು ಮೊದಲಾದ ಸಾಮಾಜಿಕ–ಸಾಂಸ್ಕೃತಿಕ ಸಂಗತಿಗಳ ಜೊತೆಗೆ ರಾಜಕೀಯ ಚರಿತ್ರೆಯನ್ನೂ ಒಳಗೊಂಡಿದೆ.

ಬ್ರಿಟೀಷ್ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಇ. ಮಾರ್ಸ್ಡೆನ್ ಅವರು ೧೯೦೩ರಲ್ಲಿ 'ಕೊಡಗು ವಿವರಣೆ' ಎಂಬ ಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ

ಕೊಡಗಿನ ಭೌಗೋಳಿಕ, ಚಾರಿತ್ರಿಕ, ಆರ್ಥಿಕ, ಮತ್ತು ಕೃಷಿಕ ವಿಷಯಗಳಿಗೆ ಸಂಬಂಧಿಸಿದಂತ ಹಲವು ವಿಚಾರಗಳನ್ನು ಆಕರ್ಷಕವಾಗಿ ವಿವರಿಸಿದ್ದಾರೆ.

ದೇಶೀಯ ವಿದ್ವಾಂಸರು-

೧೯೨೪ರಲ್ಲಿ ಪ್ರಕಟವಾದ 'ಪಟ್ಟೋಲೆ ಪಳಮೆ'ಯು ಕೊಡಗಿನ ಜಾನಪದ ಅಧ್ಯಯನಕ್ಕೆ ಒಂದು ಅಪೂರ್ವ ಕೃತಿ. ನಡಿಕೇರಿಯಂಡ ಚಿಣ್ಣಪ್ಪನವರ ಈ ಕೃತಿ ಕ್ಷೇತ್ರಕಾರ್ಯ ಹಾಗೂ ಜಾನಪದ ಅಧ್ಯಯನ, ಸಾಹಿತ್ಯದ ಅಧ್ಯಯನ, ಸಂಸ್ಕೃತಿಯ ಅಧ್ಯಯನ, ಭಾಷೆಯ ಅಧ್ಯಯನದ ದೃಷ್ಟಿಯಿಂದ ಮೌಲಿಕವಾಗಿದೆ. ಕೊಡಗಿನ ಸಂಪ್ರದಾಯ, ಆಚರಣೆಗಳು, ಪದ್ಧತಿಗಳನ್ನು ಹೇಗೆ ನಡೆಸಬೇಕು ಹಾಗೂ ನಡಸಬಾರದು ಎಂಬ ಅಜ್ಞೆಯನ್ನು ನೀಡುವಲ್ಲಿಗೆ ಸೀಮಿತಗೊಂಡಿದೆ. ಕೊಡವರ ಧರ್ಮಸಾರ ಕೃತಿ ಪುರೋಹಿತಶಾಹಿ ಧೋರಣೆ ಹಾಗೂ ಊಳಿಗಮಾನ್ಯ ಪರಂಪರೆಯನ್ನು ಸಮರ್ಥಿಸಿಕೊಳ್ಳುವ ಹಾಗೆ ಕಾಣುತ್ತದೆ. ಕೊಡವ ಜಾನಪದ ಕ್ಷೇತ್ರ ಅಧ್ಯಯನದ ಸಂದರ್ಭದಲ್ಲಿ ಇದು ಪ್ರಮುಖ ಕೃತಿಯಾಗಿದೆ.

ಅಪ್ಪಚ್ಚು ಕವಿ ಪ್ರತ್ಯೇಕವಾಗಿ ಜಾನಪದದ ಕುರಿತು ಬರೆದಿಲ್ಲವಾದರೂ 'ನಾಲ್ ನಾಟಕ' ಕೃತಿಯಲ್ಲಿ ಕೊಡಗಿನ ಎಲ್ಲ ಜಾತಿ ಸಮುದಾಯಗಳ ನಡುವಿನ ಸಹಬಾಳ್ವೆ, ಸಾಮರಸ್ಯದ ಬದುಕನ್ನು ಮತ್ತು ಒಗ್ಗಟ್ಟಿನ ವಿಚಾರವನ್ನು ಬರೆದಿದ್ದಾರೆ. ಕೊಡಗು ದೇಶವನ್ನೇ ಸರ್ವಜನಾಂಗದ ಶಾಂತಿಯ ತೋಟವಾಗಿ ಕಾಣುತ್ತಾರೆ. ಆಖಂಡ ಕೊಡಗಿನ ಧ್ವನಿಯಾಗಿ ಕಾಣುತ್ತಾರೆ.

ಬಿ.ಡಿ. ಗಣಪತಿಯವರು 'ಕೊಡವಾಸ್ ಆಂಡ್ ದೇಯರ್ ಕಲ್ಚರ್' (೧೯೬೭)ನಲ್ಲಿ ಕೊಡವರ ಜೀವನ ಶೈಲಿ, ಸಂಪ್ರದಾಯ, ಆಚರಣಗಳನ್ನು ಹೆಮ್ಮೆಯಿಂದ ಬರೆದಿದ್ದಾರೆ.

ಸಮಾಜಶಾಸ್ತ್ರಜ್ಞ ಎಂ.ಎನ್. ಶ್ರೀನಿವಾಸ್ ಅವರ 'ರಿಲಿಜಿಯನ್ ಆಂಡ್ ಸೊಸೈಟಿ ಎಮಾಂಗ್ ದಿ ಕೂರ್ಗ ಆಫ್ ಸೌತ್ ಇಂಡಿಯಾ' (೧೯೫೨) ಕೊಡವರ ಸಂಸ್ಕೃತಿಯನ್ನು ಪ್ರಾಮುಖ್ಯತೆಗೆ ತಂದ ಮಹತ್ವದ ಕೃತಿ. ಸಂಸ್ಕೃತೀಕರಣ ಎಂಬ ಪರಿಕಲ್ಪನೆಯನ್ನು ಇಟ್ಟುಕೊಂಡು ಕೊಡವರ ಬಗೆಗೆ ಸುದೀರ್ಘವಾಗಿ ಚರ್ಚಿಸಿದ್ದಾರೆ. ಬುಡಕಟ್ಟು ಸಮುದಾಯದವರಾದ ಕೊಡವರು ವೈಧಿಕ ಸಂಸ್ಕೃತಿಯನ್ನು ಅನುಸರಿಸಿ ತಮ್ಮ ಜೀವನಶೈಲಿ, ನಡವಳಿಕೆ, ಸಂಪ್ರದಾಯ ಹಾಗೂ ಆಚರಣೆಗಳನ್ನು ಬದಲಿಸಿಕೊಂಡವರು ಎಂಬುದೇ ಈ ಪರಿಕಲ್ಪನೆಯ ಸಾರ. ಕೊಡಗಿನ

ಬುಡಕಟ್ಟು ಜನಾಂಗಗಳ ಮೇಲೆ ಬ್ರಾಹ್ಮಣರ ಆಚರಣೆಗಳನ್ನು ಹೇರುವ ಮೂಲಕ ಹಿಂದೂ ಧರ್ಮದ ಏಕತ್ವ ಸ್ಥಾಪಿಸುವ ಕುರುಹನ್ನು ಈ ಕೃತಿಯಲ್ಲಿ ಕಾಣಬಹುದು. ಕೊಡವರ ಸಮಗ್ರ ವಿವರಣೆ, ಒಕ್ಕದ ರಚನೆ, ಊರು, ನಾಡುಗಳು ವಿಕಾಸ ಹೊಂದಿದ ಬಗೆಯನ್ನು ಕಟ್ಟಿಕೊಟ್ಟಿದ್ದಾರೆ. ಕೊಡವರ ವಿವಾಹ ಪದ್ಧತಿ, ಸಂಸ್ಕಾರ, ಹಬ್ಬಹರಿದಿನಗಳ ಬಗೆಗೆ ವಿಶೇಷವಾಗಿ ಉಲ್ಲೇಖವಿದೆ.

ಐ.ಮಾ. ಮುತ್ತಣ್ಣ ೧೯೫೩ರಲ್ಲಿ ಪ್ರಕಟಿಸಿದ 'ಎ ಟೈನಿ ಮಾಡೆಲ್ ಸ್ಟೇಟ್ ಆಫ್ ಸೌತ್' ಕೃತಿಯಲ್ಲಿ ರಾಜಕೀಯದೊಂದಿಗೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮೊದಲಾದ ವಿಚಾರಗಳನ್ನು ದಾಖಲಿಸಿದ್ದಾರೆ. ಕೊಡವರ ಮೂಲದ ಬಗೆಗೆ ಆಳವಾದ ಚರ್ಚೆಯನ್ನು ನಡೆಸಿ, ಮಾಹಿತಿ ನೀಡಿದ್ದಾರೆ. ಕೊಡಗಿನ ಅವಿಭಕ್ತ ಕುಟುಂಬ ಪದ್ಧತಿ ಬ್ರಿಟಿಷರ ಆಗಮನದಿಂದ ಹೇಗೆ ಶಿಥಿಲವಾಯಿತು ಎಂಬುದನ್ನು ವಿವರವಾಗಿ ಬರೆದಿದ್ದಾರೆ. ಕೃತಿಯ ಕೊನೆಯಲ್ಲಿ ಕೊಡಗಿನ ಸಾಂಸ್ಕೃತಿಕ ವಿಶೇಷತೆಯನ್ನು ವಿವರಿಸುತ್ತಾ ಹಬ್ಬಹರಿದಿನಗಳು, ಮದುವೆ-ಮುಂಜಿ ಹಾಗೂ ಸಂಸ್ಕಾರ ಆಚರಣೆಗಳ ಬಗೆಗೆ ತಿಳಿಸಿದ್ದಾರೆ. ಈ ಕೃತಿಯು ಗೆಜೆಟಿಯರ್ ಮಾದರಿಯ ಅನುಕರಣೆಯಂತೆ ಕಂಡರೂ ಕೊಡಗಿನ ಸಮಗ್ರ ಆಯಾಮವನ್ನು ಪರಿಚಯಿಸುತ್ತದೆ.

ಡಿ.ಎನ್. ಕೃಷ್ಣಯ್ಯ ಇವರ 'ಕೊಡಗಿನ ಇತಿಹಾಸ', ಶ್ರೀ ಸತ್ಯನ್ ಸಂಪಾದಿಸಿರುವ 'ಮೈಸೂರ್ ಸ್ಟೇಟ್ ಗೆಜೆಟಿಯರ್ ಕೂರ್ಗ ಡಿಸ್ಟ್ರಿಕ್' (೧೯೬೫), ಸೂರ್ಯನಾಥ ಕಾಮತ್‌ರ 'ಕರ್ನಾಟಕ ಸ್ಟೇಟ್ ಗೆಜೆಟಿಯರ್' 'ಕೊಡಗು ಡಿಸ್ಟ್ರಿಕ್ಟ್' (೧೯೮೨) ಕೊಡಗಿನ ಸಮಗ್ರ ಚಿತ್ರಣವನ್ನು ಕಟ್ಟಿಕೊಡುವಲ್ಲಿ ಸಫಲವಾದರೂ ಇಲ್ಲಿ ಸಂಪೂರ್ಣ ಕೊಡವರ ಜನಪದೀಯ ವಿಶ್ಲೇಷಣೆಯನ್ನು ಮುಖ್ಯವಾಗಿ ಪರಿಗಣಿಸಿಲ್ಲ.

ವಿಜಯ್ ಪೂಣಚ್ಚ ತಂಬಂಡ ಅವರ 'ಪಳಮೆ', 'ಆಧುನಿಕ ಕೊಡಗು' (೨೦೦೦), 'ಕಾನ್‌ಫ್ಲಿಕ್ಟ್ ಐಡೆಂಟಿಟಿಸ್ ಇನ್ ಕರ್ನಾಟಕ' (೨೦೦೪) ಸಂಶೋಧನಾ ಗ್ರಂಥ 'ಜಮ್ಮ ಸಿಸ್ಟಂ ಇನ್ ಕೊಡಗು: ಇಟ್ಸ್ ಸೋಷಿಯೋ-ಎಕನಾಮಿಕ್ ಡೈಮೆನ್ಷನ್ ೧೮೦೦-೧೯೮೦' (೧೯೯೩) ಕೊಡವ ಜನಪದ ಅಧ್ಯಯನದ ಸಂದರ್ಭದಲ್ಲಿ ಗಮನಿಸಬೇಕಾದ ಪ್ರಕಟಣೆಗಳು. ಇವರು ನಿರ್ಲಕ್ಷಿತ ಸಮುದಾಯಗಳ ಮೇಲೆ ಹೆಚ್ಚಿನ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ. ಗುಲಾಮ ವ್ಯವಸ್ಥೆಯನ್ನೂ ಚರ್ಚಿಸಿದ್ದಾರೆ. ಕೊಡಗು ಇಂದಿಗೂ ಇತಿಹಾಸ ಹಾಗೂ ಜಾನಪದ ವಿದ್ವಾಂಸರ ಆಸಕ್ತಿಯನ್ನು ಉಳಿಸಿಕೊಂಡಿದೆ.

ಡಾ. ಎಂ.ಜಿ. ನಾಗರಾಜ್ ಅವರ 'ಕೊಡಗಿನ ಹಾಲೇರಿ ರಾಜವಂಶವು' ಸಂಶೋಧನಾ ಕೃತಿಯಲ್ಲಿ ಇತಿಹಾಸ ಹಾಗೂ ಕೊಡಗಿನ ರಾಜಕೀಯ ವಿವರ ನೀಡುವಾಗಲೇ ಹಾಲೇರಿ ರಾಜಮನೆತನವು ಕೊಡವರ ಹಬ್ಬಹರಿದಿನ, ನಂಬಿಕೆ, ಆಚರಣೆಗಳಿಗೆ ನೀಡಿದ ಮಹತ್ವವನ್ನು ಸಾಂಸ್ಕೃತಿಕ ಸ್ಥರ ಎಂಬ ಅಧ್ಯಾಯದಲ್ಲಿ ವಿಸ್ತಾರವಾಗಿ ಚರ್ಚಿಸಿದ್ದಾರೆ. 'ಕೊಡಗಿನ ಕೈಮಡಗಳು' ಎಂಬ ಕೃತಿಯಲ್ಲಿ ಕೊಡವರ ಕೈಮಡಗಳ ರಚನೆ, ಉದ್ದೇಶದ ಚರ್ಚೆ ನಡೆಸಿದ್ದಾರೆ. 'ಕೊಡಗಿನ ಕೆಂಬಟ್ಟಿಗಳ ಸಂಸ್ಕೃತಿ'ಯ ಅಧ್ಯಯನದ ಸಂದರ್ಭದಲ್ಲಿಯೂ ಕೊಡವರ ಜನಪದ ಹಾಗೂ ಕೆಂಬಟ್ಟಿಗಳ ಸಂಸ್ಕೃತಿಯ ವಿವರಗಳನ್ನು ಚರ್ಚಿಸಿದ್ದಾರೆ.

ನಾಗೇಶ್ ಹೆಬ್ಬಾಲೆ ಅವರು "ಕೊಡಗಿನ ರಂಗಪ್ರದರ್ಶನ ಕಲೆಗಳು' ಕೃತಿಯಲ್ಲಿ ಕೊಡವರ ಪ್ರದರ್ಶನಕಲೆಯನ್ನು ಸಂಶೋಧನಾತ್ಮಕವಾಗಿ ಅಧ್ಯಯನ ಮಾಡಿದ್ದಾರೆ. ಅಶೋಕ ಆಳ್ವರು 'ಕೊಡವರ ಕುಣಿತಗಳು'ಕೃತಿಯಲ್ಲಿ ಕೊಡವರ ಕುಣಿತಗಳ ವಿವರವನ್ನು ನೀಡಿದ್ದಾರೆ. ನಾಗೇಶ್ ಕಾಲೂರು ಅವರ 'ಕೊಡವ ಭಾಷಿಕ ಜನಾಂಗಗಳ ಸಾಂಸ್ಕೃತಿಕ ಬದುಕು' ಕೊಡವರ ಜನಪದ ಅಧ್ಯಯನದ ಸಂದರ್ಭದಲ್ಲಿ ಮುಖ್ಯವಾದ ಕೃತಿ. ಕೊಡವರ ನಂಬಿಕೆ ಆಚರಣೆಗಳ ಕುರಿತ ದೀರ್ಘವಾದ ಮಾಹಿತಿಯನ್ನು ನೀಡಿದ್ದಾರೆ. ಕೊಡವರ ಪಾಟ್‌ಗಳ ಕನ್ನಡ ಅನುವಾದ ಮಾಡಿ ಕೊಡವೇತರ ಅಧ್ಯಯನಾಕಾಂಕ್ಷಿಗಳಿಗೆ ಅನುವು ಮಾಡಿಕೊಟ್ಟಿದ್ದಾರೆ.

ಆಧುನಿಕ ಕೊಡಗಿನ ಸಾಹಿತ್ಯದ ಕುರಿತು ಅಧ್ಯಯನ ನಡೆಸಿದ ಡಾ ಎಂ.ಪಿ. ರೇಖಾ ಅವರು ಆಧುನಿಕ ಕೊಡವ ಸಾಹಿತ್ಯವನ್ನು ಕುರಿತು ಚರ್ಚೆಯನ್ನು ನಡೆಸಿದ್ದಾರೆ. ಸರಸ್ವತಿ ಕಾರೋಣ ಅವರು ಕೊಡಗಿನ ಗೌಡ ಸಮಾಜದ ಮೇಲೆ ಸಂಶೋಧನಾ ಪ್ರಬಂಧವನ್ನು ಮಂಡಿಸಿದ್ದಾರೆ. ಇಲ್ಲಿ ಕೊಡವರ ಮತ್ತು ಕೊಡವ ಗೌಡ ಸಮಾಜದ ಸಾಂಸ್ಕೃತಿಕ ಕೊಡುಕೊಳ್ಳುವಿಕೆ ವಿವರಗಳು ಗಮನಾರ್ಹವಾದವು. ರೇವತಿ ಪೂವಯ್ಯ ಅವರ ಸಂಶೋಧನಾ ಪ್ರಬಂಧದಲ್ಲಿ 'ಕೊಡಗಿನ ತೆರ ಪದ್ಧತಿ' ಕೊಡಗಿನಲ್ಲಿ ಆಚರಣೆಯಲ್ಲಿರುವ ಕೋಲ, ಆರಾಧನೆಯ ಕುರಿತು ನಡೆಸಿದ ಸಂಶೋಧನಾ ಕೃತಿಯಾಗಿದೆ. ಕೊಡವರ ಜನಪದ ಅಧ್ಯಯನದ ಸಂದರ್ಭದಲ್ಲಿ ಪ್ರಮುಖ ಮಹಾಪ್ರಬಂಧವಾಗಿದೆ.

ಕೊಡವರ ಜನಪದವನ್ನು ಲೋಕದೃಷ್ಟಿಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲು ಈ ಎಲ್ಲಾ ಕೃತಿಗಳು ಮಹತ್ವದ್ದಾಗಿದೆ.

ಅಧ್ಯಯನದ ಆಕರಗಳು ಹಾಗೂ ಸೈದ್ಧಾಂತಿಕ ವಿಧಾನ

ಜಾನಪದ ಒಳಗೊಳ್ಳುವ ಸಾಮಾಗ್ರಿಗಳದೆಂದರೆ ಪುರಾಣಗಳು, ಕಥೆಗಳು, ಜನಪದ ಗೀತೆ ಮತ್ತು ಮೌಖಿಕ ಪರಂಪರೆಯ ಇತರ ರೂಪಗಳು. ಜನಪದ ಭಾಷೆ ಮತ್ತು ನುಡಿ ಇವುಗಳ ಮಾಧ್ಯಮ. ಜಾನಪದದಲ್ಲಿ ಜನಪದ ಗೀತೆ ಸೇರಿರುವುದರಿಂದ ಅದಕ್ಕೆ ಸಂಬಂಧಪಟ್ಟ ಜನಪದ ಸಂಗೀತ ಮತ್ತು ನೃತ್ಯ ಸೇರಿಕೊಳ್ಳುತ್ತವೆ. ಕೊಡವ ಜನಪದ ಲೋಕದೃಷ್ಟಿಯ ಸ್ವರೂಪದ ಅಧ್ಯಯನಕ್ಕಾಗಿ ಕೊಡವರ ಜನಪದ ಹಾಡು ಹಾಗೂ ಕ್ಷೇತ್ರಕಾರ್ಯದ ಮಾಹಿತಿಗಳನ್ನು ಪ್ರಧಾನ ಆಕರವನ್ನಾಗಿ ಇಟ್ಟುಕೊಳ್ಳಲಾಗಿದೆ. ಕೊಡವ ಜನಪದ ಹಾಡುಗಳಾದ ಕಾವೇರಿಪುರಾಣ, ದೇಶಕೆಟ್ಟ್ ಪಾಟ್, ಮಂಗಲ ಪಾಟ್, ಬಟ್ಟೆ ಪಾಟ್, ಪೊಲಿಚಿ ಪಾಟ್, ಪುತ್ತರಿ ಪಾಟ್, ದೇವತೆಯಡ ಪಾಟ್‌ಗಳನ್ನು ಮುಖ್ಯವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಕೃಷಿ ಸಂಬಂಧಿತವಾದ ಒಯ್ಯಪಾಟ್, ಕಾರೋಣ ಆರಾಧನೆಯ ಸಂಬಂಧಿತವಾದ ಅಪ್ಪೈಯ್ಯಂಡ ಪಾಟ್‌ಗಳನ್ನು ಗಮನಿಸಿಲಾಗಿದೆ. ಪ್ರಕಟಿತ ಹಾಗೂ ಅಪ್ರಕಟಿತ ಕೊಡವರ ಜನಪದ ಹಾಡುಗಳ ಸಂಗ್ರಹವನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಈ ಸಂಶೋಧನಾತ್ಮಕ ಅಧ್ಯಯನಕ್ಕೆ ಅವಶ್ಯವಿರುವ ಪ್ರಾಥಮಿಕ ಮಾಹಿತಿಗಳನ್ನು ಕ್ಷೇತ್ರಕಾರ್ಯದ ಮೂಲಕವೂ ಸಂಗ್ರಹಿಸಲಾಗಿದೆ. ಆಕರ ಸಾಮಾಗ್ರಿಗಳಾದ ಕೊಡವರ ಜನಪದ ಕಾವ್ಯಗಳನ್ನು ಸಂಗ್ರಹಿಸುವಾಗ ಅವುಗಳ ಸಾಂದರ್ಭಿಕ ಮಾಹಿತಿಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ. ಲಭ್ಯವಿರುವ ಪಠ್ಯಗಳ ಬೃಹತ್ ಮಾಹಿತಿಶರೀರವನ್ನು ಆಧರಿಸಿ ಪಠ್ಯಕೇಂದ್ರಿತ ಅಧ್ಯಯನ ಮಾಡಲಾಗಿದೆ. ವಕ್ತೃಗಳ ಜೊತೆಗೆ ಮುಕ್ತ ಸಂವಾದರೂಪದ ಸಂದರ್ಶವನ್ನು ಮಾಡಲಾಗಿದೆ. ಲೋಕದೃಷ್ಟಿಗೆ ಸಂಬಂಧಪಟ್ಟ ಹಾಗೆ ಲಭ್ಯವಿರುವ ಮಾಹಿತಿಗಳು ಕೊಡವರ ಕಾವ್ಯಗಳಲ್ಲಿ ಎಲ್ಲೆಲ್ಲಿ ಸಿಗುತ್ತವೆಯೋ ಅವುಗಳೆಲ್ಲವನ್ನು ಚರ್ಚಿಸಲಾಗಿದೆ. ಕೃಷಿ, ಬೇಟೆ, ನೆಲ, ಸಾಂಪ್ರದಾಯಿಕ ಆಚರಣೆಗಳು, ಜನನ–ಮರಣ ಮೊದಲಾದವುಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಪಠ್ಯಗಳಿಂದ ಸಂಗ್ರಹಮಾಡಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಕೊಡವರ ಜನಪದ ಹಾಡುಗಳನ್ನು ಸಾಂಸ್ಕೃತಿಕ ವಿಮರ್ಶೆಯ ಸೈದ್ಧಾಂತಿಕ ವಿಧಾನವಾಗಿಟ್ಟುಕೊಂಡೂ ಅಧ್ಯಯನಮಾಡಲಾಗಿದೆ. ಬೇರೆಬೇರೆ ಪಠ್ಯಗಳಲ್ಲಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧ ಪಟ್ಟಂತೆ ದೊರೆಯುವ ಮಾಹಿತಿಗಳು ಪರಸ್ಪರ ಪೂರಕವಾಗಿರುವುದನ್ನು

ಗಮನಿಸಿ ಇವುಗಳನ್ನು ಸೃಷ್ಟಿಸಿದ ಮನಸ್ಸುಗಳು ಒಂದೇ ರೀತಿಯಲ್ಲಿ ಆಲೋಚನೆ ಮಾಡಿರುವ ಮಹತ್ವದ ಅಂಶವೊಂದು ಈ ಅಧ್ಯಯನದಿಂದ ಸ್ಪಷ್ಟವಾಗಿದೆ.

ಕೊಡಗಿನ ಸಾರ್ವಜನಿಕ ಸಂವಹನ ಮಾಧ್ಯಮವಾಗಿರುವ ಕೊಡವ ಭಾಷೆಯನ್ನು ಕೊಡಗಿನ ಬಹುತೇಕ ಎಲ್ಲ ವರ್ಗದವರೂ ಬಳಸುತ್ತಾರೆ. ಪ್ರಾದೇಶಿಕವಾಗಿ ಇವರೆಲ್ಲರೂ ಕೊಡಗಿಗೆ ಸೇರಿದವರು. ಕೊಡಗಿನ ಆರಾಧನೆ, ಆಚರಣೆ, ಕುಣಿತ, ಕ್ರೀಡೆಗಳಲ್ಲಿ ಇವರೆಲ್ಲರೂ ಭಾಗವಹಿಸುತ್ತಾರೆ. ಕೊಡಗಿನ ಜೀವನಾವರ್ತನ ಮತ್ತು ವಾರ್ಷಿಕಾವರ್ತನ ಆಚರಣೆಗಳನ್ನು ಸಮಾನವಾಗಿ ನಡೆಸುತ್ತಾರೆ. ಹೀಗೆ ಭಾಷೆ, ವೃತ್ತಿ, ನೆಲ, ಆರಾಧನೆ, ಆಚರಣೆ, ಆಹಾರ ಪದ್ಧತಿ ಇತ್ಯಾದಿ ಅಂಶಗಳನ್ನು ಸಮಾನವಾಗಿ ಹಂಚಿಕೊಳ್ಳುವ ಇವರನ್ನು ಕೊಡವರು ಎಂಬುದಾಗಿಯೂ, ಇವರು ಕಟ್ಟಿ ಹಾಡಿದ ಹಾಡುಗಳನ್ನು ಕೊಡವರ ಜನಪದ ಹಾಡುಗಳೆಂದು ಪರಿಗಣಿಸಲಾಗಿದೆ. ಜಾನಪದ ಅಧ್ಯಯನವು ಸಂಸ್ಕೃತಿಯ ಅಧ್ಯಯನವೇ ಆಗಿದೆ ಎಂಬ ಗ್ರಹಿಕೆಯನ್ನು ಪ್ರಸ್ತುತ ಇಟ್ಟುಕೊಳ್ಳಲಾಗಿದೆ. ಈ ಗ್ರಹಿಕೆಗೆ ಅನುಗುಣವಾಗಿ ಕೊಡವರ ಜನಪದ ಆಕರಗಳನ್ನು, ಪಠ್ಯಗಳನ್ನು ಪರಿಕಲ್ಪನಾತ್ಮಕ ಚರ್ಚೆಗೆ ಒಳಪಡಿಸಲಾಗಿದೆ. ಕೊಡವರ ಸಂಸ್ಕೃತಿಗೂ ಕೊಡವ ಜನಪದ ಸಾಹಿತ್ಯಕ್ಕೂ ಸಾವಯವ ಸಂಬಂಧವಿದೆ. ಕೊಡವ ಪಾಟ್, ಕೊಡವರ ಕುಣಿತಗಳು, ಐನ್ ಮನೆಗಳು, ಕೈಮಡಗಳು ಇವೆಲ್ಲವೂ ಸಾಮಾಜಿಕ ವ್ಯವಸ್ಥೆಯೊಂದರ ಸಾಂಸ್ಕೃತಿಕ ಉತ್ಪನ್ನವಾಗಿದೆ. ಕೊಡವ ಜನಪದ ಪಠ್ಯಗಳ ಮೂಲಕ ಕೊಡವ ಸಂಸ್ಕೃತಿಯನ್ನು ವಿಶ್ಲೇಷಿಸುವ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಅವುಗಳನ್ನು ಪರಿಭಾವಿಸುವ ಸಂಶೋಧನ ವಿನ್ಯಾಸವನ್ನು ರೂಪಿಸಿಕೊಳ್ಳಲಾಗಿದೆ. ಕೊಡವರ ಜನಪದ ಪಠ್ಯ ಹಾಗೂ ಮಾಹಿತಿ ಶರೀರವನ್ನು ವಿಶ್ಲೇಷಿಸುವಾಗ ಅವುಗಳ ಪ್ರದರ್ಶನ ಸಂದರ್ಭವನ್ನು ಗಮನಕ್ಕೆ ತೆಗೆದುಕೊಂಡಿರುವುದರಿಂದ ಅರ್ಥ ಮತ್ತು ಕಾರ್ಯಗಳನ್ನು ಸಂಸ್ಕೃತಿನಿಷ್ಠವಾಗಿ ಶೋಧಿಸಲು ಸಾಧ್ಯವಾಗಿದೆ. ಸಂಸ್ಕೃತಿಯ ಅಧ್ಯಯನದಲ್ಲಿ ಜಾನಪದೀಯ, ಇತಿಹಾಸ, ಸಮಾಜಶಾಸ್ತ್ರೀಯ ಅಧ್ಯಯನ ವಿಧಾನಗಳೂ ಒಳಗೊಳ್ಳುವುದರಿಂದ ಪ್ರಸ್ತುತ ಸಂಶೋಧನಾ ಗ್ರಂಥದ ರಚನೆಯಲ್ಲಿ ಅಂತರ್‌ಶಿಸ್ತೀಯ ಅಧ್ಯಯನ ಕ್ರಮವನ್ನೂ ಅನುಸರಿಸಲಾಗಿದೆ.

ಸಾರಲೇಖದೊಂದಿಗೆ ಮಹಾಪ್ರಬಂಧದ ಪರಿವಿಡಿಯನ್ನು ಹಾಗೂ ಪರಾಮರ್ಶನ ಗ್ರಂಥಗಳ ಪಟ್ಟಿಯನ್ನು ಇರಿಸಲಾಗಿದೆ.

ಪರಾಮರ್ಶನ ಗ್ರಂಥಗಳು

ನಡಿಕೇರಿಯಂಡ ಚಿಣ್ಣಪ್ಪ- ಪಟ್ಟೋಲೆ ಪಳಮೆ, ಕೊಡವ ಸಾಹಿತ್ಯ ಆಕಾಡೆಮಿ.೨೦೧೨

ವಿಜಯ್ ಪೂಣಚ್ಚ ತಂಬಂಡ- ಪಳಮೆ-ಮೌಖಿಕ ಆಕರಗಳು ಕಟ್ಟಿಕೊಡುವ ಕನ್ನಡ-ಕೊಡಗು-ತುಳುನಾಡಿನ ಅಧ್ಯಯನ,ಕನ್ನಡ ವಿವಿ, ಹಂಪಿ-೨೦೦೪

ಡಾ.ಎಂ.ಜಿ.ನಾಗರಾಜ್ - ಕೊಡಗಿನ ಸುಗ್ಗಿಕಟ್ಟೆಗಳ ಅಧ್ಯಯನ, ಕನ್ನಡ ಸಾಹಿತ್ಯ ಅಕಾಡೆಮಿ, ೨೦೧೪

ಡಾ.ಎಂ.ಜಿ ನಾಗರಾಜ್ - ಕೊಡಗಿನ ಕೆಂಬಟ್ಟಿಗಳ ಸಂಸ್ಕೃತಿ, ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠ, ಮಂಗಳೂರು ವಿವಿ, ೨೦೧೭

ಡಾ.ಎಂ.ಜಿ ನಾಗರಾಜ್ - ಕೊಡಗಿನ ಹಾಲೇರಿ ರಾಜವಂಶವು, ಭಾಗ ೧, ೨, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು,೨೦೦೮

ನಾಗೇಶ್ ಕಾಲೂರು - ಕೊಡವ ಭಾಷಿಕ ಜನಾಂಗಗಳ ಸಾಂಸ್ಕೃತಿಕ ಬದುಕು, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ,೨೦೧೩

ಡಾ. ಎಂ.ಪಿ.ರೇಖಾ - ಕೊಡವ ಜನಪದ ಆಟಗಳು,ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ,೨೦೧೩

ಡಾ. ನಲ್ಲೂರು ಪ್ರಸಾದ್ ಆರ್.ಕೆ(ಪ್ರಧಾನ ಸಂ.)-ಕೊಡಗು ಜನಪದ ಸಂಸ್ಕೃತಿ, ಕೊಡಗುಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಡಿಕೇರಿ,೨೦೧೧

ಸಿ.ಎಸ್. ಸುರೇಶ್ - ಕೊಡಗಿನ ಧಾರ್ಮಿಕ ಕೇಂದ್ರಗಳು ಮತ್ತು ಗ್ರಾಮೀಣ ಉತ್ಸವಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು೨೦೧೪

ಐ.ಮಾ ಮುತ್ತಣ - ಕೊಡವ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೪

ಡಾ.ಕೋರನ ಸರಸ್ವತಿ ಪ್ರಕಾಶ್– ಕೊಡಗು ಗೌಡ ಸಮುದಾಯ ಸಾಂಸ್ಕೃತಿಕ ಅನನ್ಯತೆ, ಕನ್ಯಾಪುಣ್ಯ ಪ್ರಕಾಶನ, ಮೂರ್ನಾಡು.೨೦೧೬

ಪೆರಿಯಂಡ ಚಂಗಪ್ಪ – ಕೊಡವಡ ಆಂದೋಳತ್ ಪಾಟ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ,೨೦೧೩

ಡಾ.ಎಂ.ಜಿ ನಾಗರಾಜ್ –ಕೊಡಗಿನ ಕೈಮಡಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪

ಶ್ರೀಮತಿ ಮುಲ್ಲೇಂಗಡ ರೇವತಿ ಪೂವಯ್ಯ– ಕೊಡವ ಜನಪದ ನೃತ್ಯಗಳು ಒಂದು ಅಧ್ಯಯನ, ಕರ್ನಾಟಕ ಕೊಡವ ಸಾಹಿತ್ಯ ಪರಿಷತ್ತು, ೨೦೧೪

ಶ್ರೀ ಬಡ್ಡೀರ ಮಣಿ ಚಂಗಪ್ಪ – ದೇವನೆಲೆ, ಕರ್ನಾಟಕ ಕೊಡವ ಸಾಹಿತ್ಯ ಆಕಾಡೆಮಿ, ಮಡಿಕೇರಿ,೨೦೧೧

ಟಿ.ಸಿ ತಮ್ಮಯ್ಯ – ಕೊಡಗು ಪ್ರಕೃತಿ ಪರಿಸರ, ಕನ್ನಡ ಸಾಹಿತ್ಯ ಪರಿಷತ್ತು, ಮಡಿಕೇರಿ, ೨೦೧೩

ತಿತಿರ ರೇಖಾ ವಸಂತ – ಕೊಡವ ರಂಗಭೂಮಿ, ಪ್ರಸರಾಂಗ, ಮಂಗಳೂರು ವಿವಿ,೨೦೦೬

ಐತಿಚಂಡ ರಮೇಶ ಉತ್ತಪ್ಪ – ಕೊಡವ ಸಾಂಸ್ಕೃತಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,೨೦೧೪

ವಿಜಯ್ ಪೂಣಚ್ಚ ತಂಬಂಡ – ಕೊಡಗು ವಿವರಣೆ, ಪ್ರಸರಾಂಗ, ಕನ್ನಡ ವಿವಿ, ಹಂಪಿ,೨೦೦೫

ಅಂಜಂಡ ಬೊಳ್ಳಪ್ಪ – ವೈಚಾರಿಕ ಎಳ್ತ್‌ಯಾ ಲೇಖನ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, ೨೦೧೨

ಪ್ರೊ. ತುಕಾರಾಮ ಪೂಜಾರಿ(ಸಂ.)–ಭೌತಿಕ ಶೋಧ, ರಾಣಿ ಅಬ್ಬಕ್ಕ ತುಳು ಆಧ್ಯಯನ ಕೇಂದ್ರ, ಬಂಟ್ವಾಳ, ೨೦೧೬

ಡಾ. ಎಂ.ಜಿ ನಾಗರಾಜ್– ಕೊಡಗಿನ ಸಾಂಸ್ಕೃತಿಕ ಜಾನಪದ ನೆಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೦

ಡಾ. ನಾಗೇಶ್ ಹೆಬ್ಬಾಲೆ – ಕೊಡವ ಪರಂಪರೆಯ ಸಾಂಸ್ಕೃತಿಕ ಪದಕೋಶ, ಪ್ರಸರಾಂಗ, ಕನ್ನಡ ವಿವಿ, ಹಂಪಿ,೨೦೧೮

ಕಂಬೆಯಂಡ ಡೀನಾ ಬೋಜಣ್ಣ– ಕೊಡಗಿನ ಮುಂದ್‌ಮನೆ ಕೈಮಡ ಮಂದ್ಗಳ ಶ್ರೀಮಂತ ಪರಂಪರೆ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, ೨೦೧೭.

ಡಾ. ಬೊವ್ವೇರಿಯಂಡ ಚೆಟ್ಟಚ ಉತ್ತಯ್ಯ– ಕೊಡವ ಅರಿವೋಲೆ, ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠ, ಮಂಗಳೂರು ವಿವಿ, ೨೦೧೬

ಡಿಎನ್ ಕೃಷ್ಣಯ್ಯ– ಕೊಡಗಿನ ಇತಿಹಾಸ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೪

ಡಾ. ಪಿ.ಎನ್. ಹರೀಶ್– ಎರವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೧೧

ಛೀಮಂಡ ಈ ಕುಶಾಲಪ್ಪ– ಕೊಡಗು ಚರಿತ್ರೆಯ ಮೇಲೆ ಹೊಸ ಬೆಳಕು, ಪ್ರಿಂಟ್ ಅವೆನ್ಯೂ, ಮೈಸೂರು–೨೦೧೬

ಡಾ.ಪಿ.ಕೆ.ರಾಜಶೇಖರ– ಪಿರಿಯಾಪಟ್ಟಣದ ಕಾಳಗ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು,೨೦೧೦

ಪ್ರೊ. ಎ.ವಿ.ನಾವಡ(ಸಂ)– ಕರ್ನಾಟಕ ಸಂಶೋಧನಾ ಜಾನಪದ, ಕರ್ನಾಟಕ ಜಾನಪದ ವಿವಿ, ಗೊಟಗೋಡಿ, ೨೦೧೪

ವಿಜಯ್ ಪೂಣಚ್ಚ ತಂಬಂಡ–(ಸಂ), ರಾಜೇಂದ್ರನಾಮೆ ಮರು ಓದು, ಕನ್ನಡ ವಿವಿ, ಹಂಪಿ, ೨೦೧೮

ಡಾ. ಡಿ.ಬಿ ರಾಮಚಂದ್ರಾಚಾರ್– ಕೊಡಗು, ಸುನಂದ ಪ್ರಕಾಶನ, ೨೦೧೪

ಡಾ. ಭಾಮಿನಿ ರಾಘವಯ್ಯ– ಕೊಡಗಿನ ಬುಡಕಟ್ಟುಗಳು, ಮೈಸೂರು ವಿವಿ,೨೦೦೭

ಡಾ. ಆಶೋಕ್ ಆಳ್ವ– ಕೊಡವರ ಜನಪದ ಕುಣಿತಗಳು, ಪ್ರಸಾರಾಂಗ, ಮಂಗಳೂರು ವಿವಿ, ೨೦೧೧

ಪ್ರೊ. ಲಕ್ಕಪ್ಪಗೌಡ ಎಚ್.ಜಿ. ಕರ್ನಾಟಕ ಬುಡಕಟ್ಟುಗಳು, ಜಾನಪದ ಆಕಾಡೆಮಿ, ೧೯೯೮

ಡಾ. ಶ್ರೀನಿವಾಸ ಎಂ.ಎನ್– ದಿ ರಿಲಿಜನ್ ಆಂಡ್ ಸೊಸೈಟಿ ಆಮಾಂಗ್ ದ ಕೂರ್ಗ್ ಆಫ್ ಸೌತ್ ಇಂಡಿಯಾ, ನವದೆಹಲಿ, ೧೯೫೨.

ಅಡ್ಡಂಡ ಸಿ ಕಾರ್ಯಪ್ಪ – ಕೊಡವರ ರಂಗಭೂಮಿಯ ಕೊಡವತನ

ಡಾ. ನಾಗೇಶ್ ಹೆಬ್ಬಲೆ,– ಕೊಡವರ ಮದುವೆ, ಕನ್ನಡ ವಿವಿ, ಹಂಪಿ, ೧೯೯೯

ಪಂಜೀರಿರ ಸಿ ಬೊಳ್ಳಪ್ಪ– ಕೊಡವ ಪತ್ತಾಯ ಕೊಡವ ಪದ್ಧತಿ ಪರಂಪರೆಯ ಪರಿಚಯ

ಐ ಮಾ ಮುತ್ತಣ್ಣ – ಲೋಕದರ್ಶನ, ೧೯೮೯

ಡಾ. ಹಿ.ಶಿ. ರಾಮಚಂದ್ರೇಗೌಡ(ಸಂ)_ಜಾನಪದ ಗ್ರಹಿಕೆ:ಪರಿಕಲ್ಪನೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೪

ಸ್ಮರಣ ಪತ್ರಿಕೆ– ಕಾವೇರಿ ಸಿರಿ, ೮೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ,೨೦೧೪

ಜಾನಪದ ಕರ್ನಾಟಕ ಸಂಪುಟ ೮, ಸಂಚಿಕೆ ೨, ಜನವರಿ–ಜೂನ್, ೨೦೧೬

ಅಧ್ಯಾಯ ೧ ಪ್ರಸ್ತಾವನೆ

೧.೧ ಅಧ್ಯಯನದ ಉದ್ದೇಶ,ವ್ಯಾಪ್ತಿ, ಮಹತ್ವ
೧.೨ ಅಧ್ಯಯನದ ಸ್ವರೂಪ
೧.೩ ಕೊಡವ ಜನಪದ ಸ್ವರೂಪ,ವೈಶಿಷ್ಟ್ಯಗಳು
೧.೪ ಕೊಡವ ಜಾನಪದ ಸಾಹಿತ್ಯ ಆಕರ ಸಾಮಾಗ್ರಿಗಳು
೧.೫ ಈವರೆಗೆ ನಡೆದ ಕೊಡವ ಜನಪದ ಅಧ್ಯಯನದ ಸಮೀಕ್ಷೆ

ಅಧ್ಯಾಯ ೨ ಲೋಕದೃಷ್ಟಿ ಪರಿಕಲ್ಪನೆಯ ತಾತ್ವಿಕ ವಿವೇಚನೆ

೨.೧ ಲೋಕದೃಷ್ಟಿಯ ತಾತ್ವಿಕ ಚಿಂತನೆ
೨.೨ ಲೋಕದೃಷ್ಟಿ ಪರಿಕಲ್ಪನೆಯ ನಿರ್ವಚನ
೨.೩ ಜಾಗತಿಕ ಜಾನಪದ ಸಂದರ್ಭದ ಲೋಕದೃಷ್ಟಿಯ ಚರ್ಚೆ
೨.೪ ಕೊಡವ ಜಾನಪದಲ್ಲಿ ಲೋಕದೃಷ್ಟಿಯ ಚಿಂತನೆ

ಅಧ್ಯಾಯ ೩. ಕೊಡವ ಜನಾಂಗ

೩.೧ ಭೌಗೋಳಿಕ ಪ್ರಭಾವ
೨.೩ ಭಾಷೆ ಮತ್ತು ರಾಜಕೀಯ ಪ್ರಭಾವ
೨.೪ ಕೊಡವ ಜಾನಪದ ಮತ್ತು ಅಲಿಖಿತ ಇತಿಹಾಸದ ಪರಿಕಲ್ಪನೆ

ಅಧ್ಯಾಯ ೪. ಕೊಡವ ಸಮುದಾಯ ಮತ್ತು ಸಾಂಸ್ಕೃತಿಕ ಅನನ್ಯತೆ

೪.೧ ಕೊಡವರು ಮತ್ತು ಕೊಡಗಿನ ಇತರ ಸಮುದಾಯಗಳು
೪.೨ ಕೊಡವರು ಮತ್ತು ಕೊಡವೇತರ ಭಾಷಿಕರು
೪.೩ ಕೊಡವರ ಸಾಂಸ್ಕೃತಿಕ ಅನನ್ಯತೆ
೪.೩.೧ ಕೊಡವರ ಭೌತಿಕ ಜನಪದ ಸಂಸ್ಕೃತಿ
೪.೩.೨ ಕೊಡವರ ಐನ್‌ಮನೆ
೪.೩.೩ ಕೊಡವರ ಕೈಮಡಗಳು
೪.೩.೪ ಪ್ರಕೃತಿ ಆರಾಧನೆ ಮತ್ತು ದೇವರ ಕಾಡು

ಅಧ್ಯಾಯ ೫ ಕೃಷಿ, ಬೇಟೆ ಮತ್ತು ಆಹಾರ ಸಂಬಂಧಿತ ಲೋಕದೃಷ್ಠಿ

೫.೧ ಕೃಷಿ ಸಂಸ್ಕೃತಿಯ ಮಾಹಿತಿ
೫.೨ ವ್ಯವಸಾಯ ಸಂಬಂಧಿತ ಮಾಹಿತಿ ಶರೀರ
೫.೨.೧. ಒಯ್ಯಕಾಕುವ ಪಾಟ್
೫.೨.೨ ಎತ್ ಪೋರಾಟ ಆಚರಣೆ
೫.೨.೩ ಚಾವು ಪಾಟ್

೫.೨.೪ ದೇಶಕಟ್ಟ್‌ಪಾಟ್
೫.೩ ಹುತ್ತರಿ ಆಚರಣೆ, ಹಾಡು–ಕುಣಿತ
೫.೩.೧ ಹುತ್ತರಿ ಆಚರಣೆ
೫.೩.೨ ಹುತ್ತರಿ ಕೋಲಾಟ
೫.೩.೩ ಕೋಲಾಟದ ಹಾಡು
೫.೪ ಬೇಟೆ–ಸಾಂಸ್ಕೃತಿಕ ನೆಲೆಗಟ್ಟು
೫.೪.೧ ಪುರಾಣಗಳು
೫.೪.೨ ನರಿಮಂಗಲಪಾಟ್
೫.೫ ಕೈಲ್‌ಪೊಳ್ದ್ ಮತ್ತು ಕಾವೇರಿ ಸಂಕ್ರಮಣ
೫.೬ ಆಹಾರ ಸಂಸ್ಕೃತಿ–ಸಂಗ್ರಹ ವಿಧಾನ
೫.೭ ದುಡಿಮೆ, ಉತ್ಪಾದನೆ ಮತ್ತು ಬಳಕೆ

ಅಧ್ಯಾಯ ೬ ಕೊಡವರ ಜೀವನಾವರ್ತನ ಮತ್ತು ವಾರ್ಷಿಕಾವರ್ತನ ಆಚರಣೆಗಳು

೬.೧ ಕೊಡವರ ಜೀವನಾವರ್ತನ ಆಚರಣೆಗಳು
೬.೧.೧ ಜನನ, ನಾಮಕರಣ
೬.೧.೨ ಮದುವೆ, ಸೀಮಂತ ಮತ್ತು ಬಾಣಂತನ
೬.೧.೩ ಮರುಮದುವೆ ಮತ್ತು ಕೂಡಾವಳಿ ಪದ್ಧತಿ
೬.೧.೪ ಸಾವು ಮತ್ತು ಸಾವಿನ ನಂತರದ ಆಚರಣೆಗಳು
೬.೧.೫ ಜನನ–ಮರಣ–ಪುನರ್ಜನ್ಮ ನಂಬಿಕೆ
೬.೨ ವಾರ್ಷಿಕಾವರ್ತನ ಆಚರಣೆಗಳು
೬.೨.೧ ಹಬ್ಬಗಳು
೬.೨.೧.೧.ಕೊಡವರ ಹಬ್ಬಗಳು
೬.೨.೧.೨ ಕೊಡವರು ಆಚರಿಸುವ ಇತರೇ ಹಬ್ಬಗಳು
೬.೨.೨ ಆರಾಧನೆಗಳು
೬.೨.೨.೧ ಕೊಡವರ ಆರಾಧನೆಗಳು
೬.೨.೨.೨ ಕೊಡವೇತರ ಆರಾಧನೆಗಳು
೬.೨.೩ ಕುಣಿತಗಳು ಮತ್ತು ಆಟಗಳು
೬.೨.೩.೧ ಆರಾಧನಾ ಸಂಬಂಧಿ ಕುಣಿತಗಳು
೬.೨.೩.೨ ಕೃಷಿ ಸಂಬಂಧಿ ಕುಣಿತಗಳು
೬.೨.೩.೩ ಮನೋರಂಜನಾ ಕುಣಿತಗಳು
೬.೨.೩.೪ ಕೊಡವರ ಮನೋರಂಜನಾ ಆಟಗಳು

ಅಧ್ಯಾಯ ೭ ಉಪಸಂಹಾರ: ಅಧ್ಯಯನದ ಫಲಿತಗಳು

ಅನುಬಂಧ

೧. ಸಾಂಸ್ಕೃತಿಕ ಪದಕೋಶ
೨. ಸಂಶೋಧನಾ ಸಹಭಾಗಿಗಳ/ವಕ್ತೃಗಳ ವಿವರ
೩. ಛಾಯ ಚಿತ್ರಗಳು
೪. ಪರಾಮರ್ಶನ ಗ್ರಂಥಗಳು